ಕೊಡಗು ಸಂಗಾತಿ

ಸಂಪಾದಕಿ : ಪಟ್ಟೆಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 2 ಸಂಚಿಕೆ : 2 ಜನವರಿ 16 ರಿಂದ 31-1998 ಪುಟಗಳು : 24 ರೂ. 5



ಯುವ ಪೀಳಿಗೆಗೆ ನಿದರ್ಶರಾದ ರಾಜಕಳೆಯ ಗೌಡಕೇಸರಿ

ದಿ॥ ನಿಡ್ಯಮಲೆ ಮುದ್ದಪ್ಪ, ನಿವೃತ ನ್ಯಾಯಧೀಶರ ನೆನಪಿನಂಗಳದಲ್ಲಿ [ಲೇಖನ ಒಳಪುಟದಲ್ಲಿ]

ಕೊಡಗು ಸಂಗಾತಿ ಪ್ರಥಮ ವರ್ಷದ ಯುಗಾದಿ ವಿಶೇಷಾಂಕ-1998

ನಂ. 35, "ಸವಿತಾ ನಿಲಯ" 1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ, ಜಯಲಕ್ಷ್ಮಿಪುರಂ, ಮೈಸೂರು-12

ಕೊಡಗು ಸಂಗಾತಿ ತನ್ನ ಪ್ರಥಮ ವರ್ಷದ ಹುಟ್ಟು ಹಬ್ಬದ ಸಂದರ್ಭದಲ್ಲಿ ವಿಶೇಷ ಸಂಚಿಕೆಯನ್ನು ಹೊರತರಲು ಇಚ್ಛಿಸಿದೆ. ಕರ್ನಾಟಕದಾದ್ಯಂತ ಗೌಡ ಜನಾಂಗದ ಮನೆ ಮಾತಾಗಿ, ಓದುಗರ ಮನಗೆದ್ದು, ಸ್ವಂತಿಕೆಯಿಂದ ಮುನ್ನಡೆದಿರುವ ಈ ಪತ್ರಿಕೆ ಜನಾಂಗದವರ ಜಾಹೀರಾತು ಪ್ರಕಟಣೆಗೆ ಉತ್ತಮ ಮಾಧ್ಯಮವಾಗಿದೆ.

ಕೊಡಗು ಸಂಗಾತಿ ಹೊರ ತರುತ್ತಿರುವ ಈ ವಿಶೇಷ ಸಂಚಿಕೆ ಕಥೆ, ಸಾಹಿತ್ಯಿಕ, ವೈಚಾರಿಕ, ಹಾಸ್ಯ ಲೇಖನ, ವಿಡಂಬನೆಗಳನ್ನೊಳಗೊಂಡಿರುವುದಲ್ಲದೆ, ಹಿರಿಕಿರಿಯರೆಲ್ಲರಿಗೂ ಪ್ರೋತ್ಸಾಹಿಸುತ್ತಿರುವ ಹಾಗೂ ಪ್ರತಿಯೊಬ್ಬ ಗೌಡ ಜನಾಂಗದಲ್ಲಿಯೂ ಶಾಶ್ವತವಾಗಿ ಉಳಿಯುವ ಪತ್ರಿಕೆಯಾಗಿದೆ.

1998ರ ಏಪ್ರಿಲ್ ಮೊದಲ ವಾರದಲ್ಲಿ ಸುಂದರ ಮುದ್ರಣದೊಂದಿಗೆ ಕ್ರೌನ್ ಆಕಾರದಲ್ಲಿ ಹೊರಬರಲಿರುವ ಈ ಸಂಚಿಕೆಗೆ ತಮ್ಮ ಸಂಸ್ಥೆಯ ಹಾಗೂ ತಮ್ಮ ವೈಯಕ್ತಿಕವಾದ ಶುಭಾಶಯ ಕೋರುವ ಜಾಹೀರಾತುಗಳನ್ನು ನೀಡಿ, ಈ ಪತ್ರಿಕೆ ಬೆಳೆಯಲು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಜಾಹೀರಾತಿನ ವಿವರ –

ಹೊರ ಪುಟಗಳಿಗೆ	ರೂ	3000
ಒಳ ಒಂದು ಪುಟಕ್ಕೆ	ರೂ	2000
ಅರ್ಧ ಪುಟಕ್ಕೆ	ರೂ	1000
ಕಾಲು ಪುಟಕ್ಕೆ	ರೂ	500

(ಲೇಖನಗಳನ್ನು ಹಾಗೂ ಜಾಹೀರಾತುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 31-1-1998)

ವಿ. ಸೂ. : ವಿಶೇಷ ಸಂಚಿಕೆಗೆ ಲೇಖನಗಳು ಮತ್ತು ಜಾಹೀರಾತುಗಳನ್ನು ಕಳುಹಿಸುವವರು ವಿಶೇಷ ಸಂಚಿಕೆಗೆ ಎಂದು ಬರೆಯತಕ್ಕದ್ದು.

ವಂದನೆಗಳೊಂದಿಗೆ,

–ಸಂಪಾದಕ

ಬೇಕಾಗಿದ್ದಾರೆ

ಪತ್ರಿಕಾ ರಂಗದಲ್ಲಿ ಕನಿಷ್ಠ 2 ವರ್ಷ ಅನುಭವ ಹೊಂದಿರುವ, ಎಲ್ಲಾ ಕೆಲಸಗಳನ್ನು ನಿಭಾಯಿಸಬಲ್ಲವರು "ಕೊಡಗು ಸಂಗಾತಿ ಪತ್ರಿಕೆ" ಗೆ ಬೇಕಾಗಿದ್ದಾರೆ.

ಆಸಕ್ತರು ಸಂಗಾತಿ ಕಾರ್ಯಾಲಯವನ್ನು ಸಂಪರ್ಕಿಸಿ.

–ಸಂ.

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟೆಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ರಮೇಶ್

ವರದಿಗಾರ :
ಪಟ್ಟೆಡ ಎಲ್. ಶಿವಕುಮಾರ್

ಕಾರ್ಯ ನಿರ್ವಾಹಕಿ :
ಕು|| ಗೀತಾ ಮೋಂಟಡ್ಕ

ಪತ್ರಿಕಾ ಪ್ರತಿನಿಧಿ :
ಕು|| ಧನು ಚೆರಿಯಮನೆ

ಕಛೇರಿ ನಿರ್ವಹಣೆ :
ಪಟ್ಟೆಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ
ಮಣ್ಣಾಪುರ ಧರಣಿ ಗಣಪತಿ

ಮುದ್ರಕರು :
ಮಣ್ಣಾಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,

ಗೌರವ ಸಂಪಾದಕ :
ಪಟ್ಟೆಡ ಎಂ. ಪ್ರಭಾಕರ್

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 1ನೇ ಮುಖ್ಯ ರಸ್ತೆ
4ನೇ ಬ್ಲಾಕ್, ಡಿವಿಜನಲ್ ಟೆಲಿಕಾಂ
ಕಛೇರಿ ಹತ್ತಿರ, ಜಯಲಕ್ಷ್ಮೀಪುರಂ
ಮೈಸೂರು-12.

ಒಳನೋಟ

ಪುಟಗಳು

ಅರೆ ಭಾಷಿಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	**5 ರೂ.**
ಅರ್ಧ ವಾರ್ಷಿಕ	:	**60 ರೂ.**
ವಾರ್ಷಿಕ ಚಂದಾ	:	**120 ರೂ.**

ಸಂಪಾದಕೀಯ :

ಕೊಡಗು ಗೌಡರ ಚರಿತ್ರೆಯಲ್ಲಿ ಸುವರ್ಣಯುಗ ಪ್ರಾರಂಭ

ಒಂದು ದೇಶದ ಚರಿತ್ರೆಯಲ್ಲಿ ಆ ಸಮಯದಲ್ಲಿ ಆ ದೇಶದ ಆರ್ಥಿಕ ಸಾಮಾಜಿಕ ಕಲೆ, ಸಾಹಿತ್ಯ ಸಮೃದ್ಧಿಯ ಘಟ್ಟವನ್ನು ತಲುಪಿದಾಗ ಆ ಕಾಲವನ್ನು ಸ್ವರ್ಣಯುಗವೆಂದು ಚರಿತ್ರೆಕಾರರು ಕರೆಯುತ್ತಾರೆ. ಭಾರತದಲ್ಲಿ ಗುಪ್ತರ ಕಾಲವನ್ನು ಇಂಗ್ಲೆಂಡಿನಲ್ಲಿ ಎಲಿಜೆಬೆತ್ ರಾಣಿಯ ಕಾಲವನ್ನೂ ಗ್ರೀಸ್‌ನಲ್ಲಿ ಪೆಂಕಿಲನ್‌ನ ಕಾಲವನ್ನೂ ಸ್ವರ್ಣಯುಗವೆಂದು ಕರೆದಿದ್ದಾರೆ. ಅದೇ ರೀತಿ ಒಂದು ಸಮಾಜದ ಚರಿತ್ರೆಯಲ್ಲೂ ಕಂಡು ಬರುತ್ತದೆ. 1997ನೇ ಇಸವಿಯಲ್ಲಿ ಕೊಡಗಿನ ಗೌಡರ ಚರಿತ್ರೆಯಲ್ಲಿ "ಸ್ವರ್ಣ" ಯುಗ ಪ್ರಾರಂಭವಾಗಿದೆ. ಈಗ ಎರಡು ಮೂರು ವರ್ಷಗಳಿಂದ ಕಾಫಿಯ ಬೆಲೆ ಹೆಚ್ಚಿದುದರಿಂದ ಗೌಡರ ಆರ್ಥಿಕ ಸ್ಥಿತಿ ಸುಧಾರಿಸಿದೆ. ಗೌಡರ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ರ್‍ಯಾಂಕ್ ವಿಜೇತರಾಗಿ ಹೊರಹೊಮ್ಮುತ್ತಿದ್ದಾರೆ. ಆಟೋಟಗಳಲ್ಲಿ ರಾಜ್ಯಮಟ್ಟ, ರಾಷ್ಟ್ರಮಟ್ಟದಲ್ಲಿ ಸ್ಪರ್ಧಿಸಿ ಉತ್ತಮ ಪ್ರಶಸ್ತಿ ಪಡೆಯುತ್ತಿದ್ದಾರೆ. ಸರ್ಕಾರಿ ಹಾಗೂ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಪ್ರಶಸ್ತಿಗಳನ್ನು ಗಳಿಸುತ್ತಾರೆ. ಸಾಮಾಜಿಕ ಚಟುವಟಿಕೆಗಳು ಬೆಂಗಳೂರು, ಕೊಡಗು ಮತ್ತು ದ.ಕ. ಗೌಡ ಸಮಾಜ, ಕೊಡಗು ಗೌಡ ಯೂತ್ ಅಸೋಷಿಯೇಷನ್, ಮೈಸೂರಿನಲ್ಲಿ ಗೌಡ ಮಹಿಳಾ ಒಕ್ಕೂಟ, ಮಡಿಕೇರಿಯಲ್ಲಿ ಕೊಡಗು ಗೌಡ ಮಹಿಳಾ ಒಕ್ಕೂಟಗಳು ಸ್ಥಾಪನೆಕೊಂಡಿವೆ. ಬೆಂಗಳೂರಿನ ಎರಡು ಸಮಾಜಗಳಲ್ಲಿ ಯುವ ವೇದಿಕೆ ಸ್ಥಾಪಿಸಲಾಗಿದೆ. ಬೆಂಗಳೂರಿನಲ್ಲಿ ಅಮ್ಮಾಜಿ ಪೊನ್ನಪ್ಪನವರ ಕಾವೇರಿನಾಡು ಸಂಸ್ಥೆ ಉದಯವಾಗಿದೆ. ಬೆಂಗಳೂರಿನ ಗೌಡ ಸಮಾಜವು ಆಟೋಟಗಳನ್ನು ಸ್ಪರ್ಧೆಯ ಮೂಲಕ ಪ್ರೋತ್ಸಾಹ ನೀಡಿ, ಯುವಕ ಯುವತಿಯರು ಮುಂದೆ ಬರುವುದಕ್ಕೆ ನೆರವು ನೀಡಿದ್ದಾರೆ. ಮಡಿಕೇರಿಯಲ್ಲಿ ಜಿಲ್ಲಾಮಟ್ಟದ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ರಚಿತವಾಗಿದೆ. ಮಡಿಕೇರಿಯಲ್ಲಿ ಗೌಡ ಸಾಂಸ್ಕೃತಿಕ ಅಕಾಡೆಮಿ ಮುಖಾಂತರ ನಶಿಸಿಹೋದ ಗೌಡ ಸಾಂಪ್ರದಾಯಿಕ ಸೋಬಾನೆಗಳು, ದೈವದ ಕೋಲ, ಕೋಲಾಟ, ನೃತ್ಯರೂಪಕ, ಭರತನಾಟ್ಯ, ಅರೆಭಾಷೆಯ ಕಿರುನಾಟಕ, ಬೆಂಗಳೂರು ಗೌಡ ಸಮಾಜದ ಭಾಷಣ ಸ್ಪರ್ಧೆ, ಕ್ವಿಜ್ ಸ್ಪರ್ಧೆಗಳನ್ನು ಏರ್ಪಡಿಸಿ ಯುವ ಪೀಳಿಗೆಗೆ ಜ್ಞಾನ ಭಂಡಾರವನ್ನು ಬೆಳೆಸುವ ಅವಕಾಶ ಮಾಡಲಾಗಿದೆ.

ಸಾಹಿತ್ಯದಲ್ಲು, ಸಾಹಿತ್ಯ ಮತ್ತು ಪತ್ರಿಕಾರಂಗದಲ್ಲಿ ತಮ್ಮದೇನು ಕಡಿಮೆ ಎಂಬಂತೆ ಗೌಡರ ಚರಿತ್ರೆ, ಸಂಸ್ಕೃತಿ, ಕಥೆ, ಕವನಗಳನ್ನು ಜನತೆ ಓದಲು ಬರವಣಿಗೆಗಳ ಮೂಲಕ ತಮ್ಮಲ್ಲಿ ಬಚ್ಚಿಟ್ಟುಕೊಂಡಿದ್ದ ಪ್ರತಿಭೆಯನ್ನು ಹೊರಗಿಡಲು ಸಂಧರ್ಭದ ಅವಕಾಶಕ್ಕಾಗಿ ಮೈಸೂರಿನಿಂದ ಹೊರಹೊಮ್ಮಿದ ಕೊಡಗು ಸಂಗಾತಿ ವೈಯಕ್ತಿಕ ಪರಿಚಯಗಳ ಅರಿವು ತಿಳಿವುಗಳ ಮೂಲಕ ಮಾಧ್ಯಮವಾಗಿ ಜನರ ಐಕ್ಯತೆಯನ್ನು ಸಾಧಿಸುವ ದಿಟ್ಟಮಾಧ್ಯಮವಾಗಿ ಹೊರಹೊಮ್ಮಿದೆ. ಈ ಮೇಲಿನ ಸಂಗತಿಯೆಲ್ಲವು 1997ನೇ ಸಂವತ್ಸರದಲ್ಲಿ ಕಾಣಿಸಿಕೊಂಡ ಗೌಡ ಜನರ ಸ್ವರ್ಣಯುಗದ ಪ್ರಾರಂಭಿಕ ಮುನ್ಸೂಚನೆಗಳು.

ಜನಾಂಗದಲ್ಲಿ ದುರ್ಜನರು ಬೆಳೆಯಲು ಸಜ್ಜನರ ನಿಷ್ಕ್ರಿಯತೆಯೇ ಕಾರಣ

–ಸಂಗ್ರಹ

ಗೌಡಕೇಸರಿ ದಿ|| ನಿಡ್ಯಮಲೆ ಮುದ್ದಪ್ಪನವರ ಜೀವನ ಚರಿತ್ರೆ

ಕೊಡಗಿನಲ್ಲಿ ಗೌಡಜನಾಂಗವು ಕೊಟ್ಟೆಪಾಳೆ, ತುಳುನ ಎಂಬ ನಿಂದನೆಯ ನುಡಿಗಳನ್ನು ಸಹಿಸಲಾರದೆ ತಮ್ಮ ಮಾತೃಭಾಷೆಯನ್ನು ಬಳಸಲೂ ಹಿಂಜರಿಯುತ್ತಿದ್ದ ಕಾಲವೊಂದಿತ್ತು. ಜಗತ್ತಿನಲ್ಲಿ ಧರ್ಮವು ನಶಿಸಿ ಅಧರ್ಮವು ಹೆಚ್ಚಾದಾಗ ವಿಷ್ಣುವೇ ಅವತಾರವೆತ್ತಿ ಬಂದು ಧರ್ಮವನ್ನು ಕಾಪಾಡುತ್ತಾನೆಂಬುದು ಹಿಂದುಪುರಾಣಗಳ ಹೇಳಿಕೆ. ಅದೇ ರೀತಿ ಗೌಡಜನಾಂಗದ ಪಾಲಿಗೆ ಸೂರ್ಯನೋಪಾದಿಯಲ್ಲಿ ಜನ್ಮ ತಳೆದು ಬಂದ ಶ್ರೀಹರಿಯೇ ನಿಡ್ಯಮಲೆ ಮುದ್ದಪ್ಪನವರು. ಗೌಡ ಜನಾಂಗದಲ್ಲೇ ಏಕೈಕ ನ್ಯಾಯಾಧೀಶರಾಗಿ, ಕೊಡಗಿನಲ್ಲಿ ಗೌಡ ಜನಾಂಗದ ಇರುವಿಕೆಯನ್ನು ಸ್ಪಷ್ಟಗೊಳಿಸಿ, ಅವರನ್ನು ವಿದ್ಯಾವಂತ ಜನಾಂಗವನ್ನಾಗಿ ರೂಪುಗೊಳಿಸಿ ಸಮಾಜದಲ್ಲಿ ತಲೆಯೆತ್ತುವಂತೆ ಮಾಡಿದ ಗೌಡಕೇಸರಿ ಶ್ರೀ ನಿಡ್ಯಮಲೆ ಮುದ್ದಪ್ಪನವರ ರೋಚಕ ಜೀವನ ಕಥೆಯನ್ನು ಹಲವಾರು ಲೇಖಕರು ಸಾದರಪಡಿಸಿದ್ದಾರೆ. 'ಗೌಡಕೇಸರಿ ದಿ|| ನಿಡ್ಯಮಲೆ ಮುದ್ದಪ್ಪನವರ ಜನ್ಮಶತಾಬ್ಧಿ ಸ್ಮರಣ ಸಂಚಿಕೆ' ಎಂಬ ಹೊತ್ತಿಗೆಯು ಬೆಂಗಳೂರಿನ 'ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ' ದಿಂದ ಪ್ರಕಾಶನಗೊಂಡಿದೆ. ಈ ಪುಸ್ತಕದಿಂದ ಆಯ್ದ ಲೇಖನಗಳನ್ನು 'ಸಂಗಾತಿ'ಯು ಕಂತುಗಳ ರೂಪದಲ್ಲಿ ನಿಮ್ಮ ಮುಂದಿಡುತ್ತಿದೆ.

-ಸಂ

ಲೇಖಕ : ದಿ|| ಶ್ರೀ ನಿಡ್ಯಮಲೆ ಅನಂತ್

ನನ್ನ ತಾಯಿಯವರು ಹೇಳಿದಂತೆ ಗುಡ್ಡೆ ನಿಡ್ಯಮಲೆಯಲ್ಲಿ ನಿಡ್ಯನೆಂಬ ಆದಿವಾಸಿಯೊಬ್ಬನಿದ್ದು, ನಮ್ಮ ಹಿರಿಯರು ಅವನಿಂದ ಸ್ವಲ್ಪ ಸ್ಥಳ ಪಡೆದುಕೊಂಡಿರುವುದರಿಂದಲೂ, ಮಲೆಯಿಂದ ಆವೃತ್ತವಾದ ಸ್ಥಳವಾದುದರಿಂದ ನಿಡ್ಯನ ಮಲೆ ಕ್ರಮೇಣ ನಿಡ್ಯಮಲೆ ಎಂದು ಸದ್ರಿ ಮನೆತನಕ್ಕೆ ಹೆಸರಾದುದ್ದು. ಇದು ನಿಜವೆಂಬ ವಿಚಾರ ನನ್ನದು! ನಮ್ಮ ಸಕುಟುಂಬದ ಹಿರಿಯ ಶ್ರೀಯುತ ಮಂದಣ್ಣನವರು, ತಮ್ಮ ಹಿರಿಯರು ಸುಳ್ಯದಿಂದ ಬಂದು ಭಾಗಮಂಡಲದ ದೇವಸ್ಥಾನದ ಆಸುಪಾಸಿನಲ್ಲಿ ನೆಲೆಸಿದರು ಎಂದು ಹೇಳುತ್ತಾರೆ. ವಿಪರ್ಯಾಸವೆನಿಸಿದ್ದರೂ ನಮ್ಮ ಗುಡ್ಡೆ ನಿಡ್ಯಮಲೆ ಮನೆಯವರು ಮತ್ತು ಭಾಗಮಂಡಲದ ಹತ್ತಿರ ದರ್ಗನ ಮನೆಯೆಂದು ಹೆಸರಿರುವ ಮನೆಯವರೂ ಒಂದೇ ಕುಟುಂಬದವರು. ಗುಡ್ಡೆ ನಿಡ್ಯಮಲೆಯಲ್ಲಿ ಮನೆ ದೇವರಾಗಿ ಆರಾಧಿಸುವ ವೆಂಕಟರಮಣ, ವಿಷ್ಣುಮೂರ್ತಿ, ಧರ್ಮದೈವ, ಪಾಷಾಣಮೂರ್ತಿ ದೈವಗಳು ಹಾಗೂ ದೈವದ ಉತ್ಸವಕ್ಕೆ ದರ್ಗನ ಮನೆಯಿಂದಲೂ ಅಕ್ಕಿಸಂತಿಗೆ ನೀಡುವ ಕ್ರಮವಿತ್ತಂತೆ.

ನನ್ನ ತಾಯಿ ಚಿನ್ನಮ್ಮನವರು ಸುಳ್ಯ ತಾಲ್ಲೂಕಿನ ಅಡ್ಕಂಗಾಯ ಮನೆತನದಲ್ಲಿ ಅವರ ತಂದೆಗೆ ಒಬ್ಬರೇ ಪುತ್ರಿಯಾಗಿ ಜನಿಸಿದರು. ನಮ್ಮ ತಂದೆ ಬೆಳ್ಯಪ್ಪನವರು ಇವರನ್ನು 1912 ರಲ್ಲಿ ಲಗ್ನವಾದರು. ನನ್ನ ತಂದೆಯವರು ಮಡಿಕೇರಿಯ ಚೀಫ್ ಕಮೀಷನರ್ ಆಫೀಸಿನಲ್ಲಿ ಹೆಡ್ ಮುನ್ಸಿ ಆಗಿ ಸೇವೆ ಸಲ್ಲಿಸುತ್ತಿದ್ದರು. ನನ್ನ ತಂದೆಯವರು ತನ್ನ 53ನೇ ವಯಸ್ಸಿನಲ್ಲಿ ನಿಧನರಾದರು. ಅನಂತರ ನಮ್ಮ ತಾಯಿಯೇ ಜವಾಬ್ದಾರಿ ಹೊತ್ತು ನಮ್ಮ ಉನ್ನತಿಗೆ ಕಾರಣಕರ್ತೆಯಾದರು. ಹಾಗಾಗಿ ಅವರು ಸಂದರ್ಭ ಬಂದಾಗಲೆಲ್ಲ ನಮ್ಮ ಹಿರಿಯರ ಬಗ್ಗೆ ತಿಳಿಸುತ್ತಿದ್ದರು ಹಾಗಾಗಿ ನನ್ನ ತಂದೆಯ ತಂದೆ. ಪಾರುಪತ್ತೇಗಾರ ದಿ|| ರಾಮಪ್ಪನವರ ಹಾಗೂ ಆಗಿನ ಪರಿಸರದ ಇತರ ಕೆಲವು ವಿಷಯಗಳ ಬಗ್ಗೆ ಬರೆಯಲು ಸಮರ್ಥನಾದೆ.

ನನ್ನ ಅಜ್ಜ ರಾಮಪ್ಪನವರ ತಂದೆ ಸುಬ್ಬಯ್ಯನವರು

ನನ್ನ ಅಜ್ಜನಿಗೆ ಐದನೇ ತರಗತಿಯವರೆಗೆ ವಿದ್ಯೆ ಕೊಡಲಾಗಿತ್ತು. ಈ ಅಲ್ಪ ವಿದ್ಯೆಯಲ್ಲಿ ನನ್ನ ಅಜ್ಜ ರಾಮಪ್ಪನವರು ಕೊಡಗಿನಲ್ಲಿ ಭಾಗಮಂಡಲ ನಾಡಿನಲ್ಲಿ ಪಾರುಪತ್ತೇಗಾರರಾದದ್ದು ಹೇಗೆ ಎಂದು ಆಶ್ಚರ್ಯವಾಗುತ್ತಿದೆ. ರಾಮಪ್ಪನವರ ಕಾಲದಲ್ಲಿ ಪೆರಾಜೆ ಭಾಗಮಂಡಲ ನಾಡಿಗೆ ಸೇರಿತ್ತು. ಆ ಕಾಲದಲ್ಲಿ ಪೆರಾಜೆಯಿಂದ ಮಡಿಕೇರಿ ಭಾಗಮಂಡಲಕ್ಕೆ ನಡಿಗೆಯ ದಾರಿ ಅಷ್ಟೆ. ಹಿಂದಿನವರು ಎಷ್ಟು ಮೈಲಿಗಳ ದೂರವಿದ್ದರೂ ನಡೆದೆ ಹೋಗುತ್ತಿದ್ದರು ಎಂದರೆ ಈಗಿನವರಿಗೆ ನಂಬಲಸಾಧ್ಯವಾದ ವಿಷಯವಾಗಿದೆ. ಅನುಕೂಲಸ್ಥರು ಎತ್ತಿನ ಗಾಡಿಯಲ್ಲಿ ಪ್ರಯಾಣಿಸುತ್ತಿದ್ದರು. ಹೆಚ್ಚಿನ ಸೌಕರ್ಯವೆಂದರೆ ಪಲ್ಲಕ್ಕಿ ಅಥವಾ ಕುದುರೆ. ನಮ್ಮಜ್ಜ ಆಗಾಗ ಭಾಗಮಂಡಲ ನಾಡಿಗೆ ಹೋಗಬೇಕಾಗಿ ಬರುತ್ತಿತ್ತು. ಸದ್ರಿನಾಡಿನ ಎಲ್ಲಾ ಗ್ರಾಮಗಳ ರೆವಿನ್ಯೂ ಕೆಲಸ ಇವರ ಅಧಿಕಾರಕ್ಕೊಳಪಟ್ಟಿತ್ತು. ಆದ್ದರಿಂದ ಪಾರುಪತ್ತೇಗಾರಿಕೆ ಅಷ್ಟೊಂದು ಸುಲಭವೂ ಅಲ್ಲ. ಆಗಿನ ಕಾಲದಲ್ಲಿ ಅದು ದೊಡ್ಡ ಹುದ್ದೆಯಾಗಿತ್ತು. ನಮ್ಮಜ್ಜನನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಹೋಗುತ್ತಿದ್ದರಂತೆ. ಹೋಗುವಾಗ ಅದೊಂದು ಮೆರವಣಿಗೆಯಂತೆ ಕಂಡುಬರುತ್ತಿತ್ತಂತೆ. ನಮ್ಮಜ್ಜ ಜನರ ಪ್ರೀತಿ ಮತ್ತು ಮರ್ಯಾದೆ ಗಳಿಸಿದ್ದರಂತೆ.

(ಮುಂದಿನ ಸಂಚಿಕೆಗೆ)

ಮದುವೆ ಸಮಾರಂಭಗಳಲ್ಲಿ ಗೌಡ ಉಡುಪಿನಲ್ಲಿ ಪೇಟಾಧಾರಿಯಾಗಿ ಮೆರೆದ

ದಿ|| ಶ್ರೀ ಕೋಡಿ ಬೋಜಪ್ಪ ಮೇದಪ್ಪ

ಭಾಗಮಂಡಲನಾಡು, ಪದಕಲ್ಲು ಗ್ರಾಮದ ಶ್ರೀಮತಿ ಮತ್ತು ಶ್ರೀ ಕೋಡಿ ಬೋಜಪ್ಪ ಮತ್ತು ತಂಗಮ್ಮ ದಂಪತಿಗಳ 2 ಗಂಡು, 2 ಹೆಣ್ಣು ಮಕ್ಕಳಲ್ಲಿ ಇವರು ಕಿರಿಯವರು. ಹಿರಿಯ ಅಣ್ಣ ಮುದ್ದಯ್ಯ ಉತ್ತಮ ರೈತರಾಗಿ ಮಾದರಿ ಜೀವನ ಸಾಗಿಸುತ್ತಿದ್ದಾರೆ. ಒಂದನೇ ಮಗಳು ಪದಕಲ್ಲು ಗ್ರಾಮದ ನಂಗಾರು ಚಂಗಪ್ಪನವರನ್ನು ವರಿಸಿದ್ದಾರೆ. 2ನೇ ಯವರು ಸೋಮವಾರಪೇಟೆ ತಾ|| ಗಲಗಂದೂರು ಗ್ರಾಮದ ಕೇಜನ ಲಿಂಗಪ್ಪನವರನ್ನು ವಿವಾಹವಾಗಿದ್ದಾರೆ. ಮೇದಪ್ಪನವರು 10–6–1938ರಲ್ಲಿ ಜನಿಸಿ, ಅಮಂದೂರು ಗ್ರಾಮದ ಪಟ್ಟಡ ಅಯ್ಯಮ್ಮನವರ ಪುತ್ರಿ ಮಾಚಮ್ಮನವರನ್ನು ವಿವಾಹವಾಗಿದ್ದಾರೆ. ಇವರು ತಮ್ಮ ಪ್ರಾಥಮಿಕ ವಿದ್ಯೆಯನ್ನು ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಅಂದಿನ 7ನೇ ತರಗತಿಯನ್ನು ಪಾಸು ಮಾಡಿದರು. ಇವರು ಬಡವರ್ಗದ ಸಂಸಾರದಲ್ಲಿ ಜನಿಸಿದರು. ಇವರ ಅಣ್ಣ ಚಿಕ್ಕ ಪ್ರಾಯದಲ್ಲೆ ತೀರಿಕೊಂಡಾಗ ಮನೆಯ ವ್ಯವಹಾರವೆಲ್ಲ ಇವರ ಮೇಲೆ ಬಿದ್ದಿತು.

ಇವರು ಟೈಲರಿಂಗ್, ಬಟ್ಟೆ ಅಗಂಡಿ ಮತ್ತು ಮನೆ ವ್ಯವಹಾರವನ್ನು ನಡೆಸುತ್ತಿದ್ದರು. ಬರಬರುತ್ತಾ ಶ್ರೀಯುತರು ಸಮಾಜ ಸೇವೆ ಮಾಡುತ್ತಾ ಭಾಗಮಂಡಲದ ಜೇನು ಸಂಘದ ನಿರ್ದೇಶಕರಾಗಿ 1972ರಲ್ಲಿ ಆಯ್ಕೆಯಾದರು, ನಂತರ ಚೆಟ್ಟಿಮಾನಿಯ ನ್ಯಾಯಬೆಲೆ ಅಂಗಡಿ ಮತ್ತು ಜೇನುಸೊಸೈಯ ಕಾರ್ಯದರ್ಶಿಯಾಗಿ 1976ರ ತನಕ ದುಡಿದಿದ್ದಾರೆ. ತಾನು ಓದಿದ ಚೆಟ್ಟಿಮಾನಿಶಾಲೆಯ ನಿರ್ದೇಶಕರಾಗಿ ದುಡಿಮೆ ತನ್ನ ಅಂತಿಮ ಕ್ಷಣದ ತನಕ. ಭಾಗಮಂಡಲ ಕಾವೇರಿ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯದರ್ಶಿಯಾಗಿ 1975 ರಿಂದ 1980 ರ ತನಕ ದುಡಿಮೆ, ನಂತರ 1980 ರಿಂದ 1985 ರ ತನಕ ಅಧ್ಯಕ್ಷಗಿರಿ ಪಟ್ಟ.

ಪದಕಲ್ಲು ಗ್ರಾಮಾಧ್ಯಕ್ಷರಾಗಿ ಸಾಕಷ್ಟು ದುಡಿದುದು ಅಲ್ಲದೆ, 15 ವರ್ಷಗಳ ಕಾಲ ತನ್ನೂರಿನ ಭಗವತಿ ದೇವಿಯ ಉತ್ಸವದಲ್ಲಿ ದೀವಿಗೆ ಹಿಡಿದ ಕೀರ್ತಿ ಇವರದು. ಊರಿನ ವ್ಯಾಜ್ಯ ಪಂಚಾಯಿತಿಯ ತೀರ್ಮಾನದಲ್ಲಿ ಎತ್ತಿದ ಕೈಯಾಗಿ ಈ ಗ್ರಾಮದಲ್ಲಿ ಪ್ರಭಾವ ಬೀರಿದರು. ಊರಿನ ಹಬ್ಬಗಳು ಯಾವುದೇ ಲೋಪದೋಷವಿಲ್ಲದೆ ನಿರಂತರವಾಗಿ ಇವರಿಂದ ನಡೆಯುತ್ತಿದ್ದವು. ಇವರ ಈ ಕಾಯಕವು ಯುವಪೀಳಿಗೆಗೆ ಮಾದರಿಯಾದ ವ್ಯಕ್ತಿತ್ವವಾಗಿದೆ.

ತನ್ನ ಸ್ವಸಾಮರ್ಥ್ಯದಿಂದ ನಂಗಾರು ಮತ್ತು ಕೊಡಿಮನೆತನಗಳು ಕೈಲ್ ಮುಹೂರ್ತ ಹಾಗೂ ಕ್ರೀಡಾ ಚಟುವಟಿಕೆಗಳನ್ನು ನಡೆಸುವಲ್ಲಿ ಯಶಸ್ಸು ಕಂಡಿದ್ದವು. ಕೋಡಿ ಐನ್‌ಮನೆಯು ಬಿದ್ದು ಮಣ್ಣುಗೂಡಿದಾಗ ಅಲ್ಲಿಯ ದೇವರನ್ನು ತಂದು ತನ್ನ ಸ್ವಂತ ಮನೆಯನ್ನೆ ದೈವನೆಲೆಯಾಗಿ ಪರಿವರ್ತಿಸಿ, ಅಲ್ಲಿಯೇ ಶ್ರೀ ದೈವದ ಹರಿಸೇವೆ ಮತ್ತು ಕೆಂಚರಾಯನ ಉತ್ಸವ ಮಾಡಿ ಏಳು ಮಲೆ ತಿರುಪತಿ ತಿಮ್ಮಪ್ಪನ ಪರಮಭಕ್ತರಾಗಿ ಸೇವೆಗೈದ ಇವರ ಭಕ್ತಿಯು ಮೇಲ್ಮಟ್ಟದಾಗಿತ್ತು.

ತನ್ನ ಜೀವಿತಾವಧಿಯಲ್ಲಿ ಬಡಬಗ್ಗರಿಗೆ ಸಾಕಷ್ಟು ಧನ ಸಹಾಯ ಮಾಡಿದರಲ್ಲದೆ, ಕೈಲಾದ ಕಿಂಚಿತ್ ಸೇವೆಯನ್ನು, ಧಾನ್ಯ ಸೇವೆಯನ್ನು ಸಹ ಮಾಡಿದ ಕೀರ್ತಿ ಇವರದು.

ಕಾಂಗ್ರೆಸಿನ ಸಕ್ರಿಯ ಕಾರ್ಯಕರ್ತರಾಗಿ ಚೆಟ್ಟಿಮಾನಿ ಪಂಚಾಯಿತಿ ಅಧ್ಯಕ್ಷರಾಗಿ ಶ್ರೀಮತಿ ಇಂದಿರಾಗಾಂಧಿಯವರ ಅಧಿಕಾರದ ಅವದಿ 1976ರ ತನಕ ಸೇವೆ ಸಲ್ಲಿಸಿ ತದನಂತರ 1977ರಲ್ಲಿ ಜನತಾ ಪಕ್ಷದ ಉದಯವಾದಾಗ ಚೆಟ್ಟಿಮಾನಿಯ ಪಂಚಾಯಿತಿ ವ್ಯಾಪ್ತಿಯಲ್ಲಿ ಜನತಾ ಪಕ್ಷದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಣೆ 1979ರಲ್ಲಿ ಜನತಾಪಾರ್ಟಿ ಹೋಳಾದ ನಂತರ R.S S. ನ ಕಡೆಗೆ ಒಲವು. ಇವರು R.S.S. ನ ಸಕ್ರಿಯ ಕಾರ್ಯವಾಹಕರಾಗಿ ಚೆಟ್ಟಿಮಾನಿಯ ಬಿಜೆಪಿ ಘಟಕದ ಅಧ್ಯಕ್ಷರಾಗಿಯು! ಕುಂದಚೇರಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿ ಸುಮಾರು 4 ವರ್ಷಗಳ ಸೇವೆಗೈದರು. ವಿಶ್ವ ಹಿಂದೂ ಪರಿಷತ್ತಿನಲ್ಲಿ ತನ್ನನ್ನು ತಾನೇ ಸಮರ್ಪಿಸಿಕೊಂಡು, ಕಟ್ಟಾ ಹಿಂದೂ ಅಭಿಮಾನಿಯಾಗಿದ್ದ ಇವರು ಚೆಟ್ಟಿಮಾನಿ ವಿಶ್ವ ಹಿಂದೂ ಪರಿಷತ್‌ನ ಅಧ್ಯಕ್ಷರಾಗಿ 1997ರ ತನಕ ತನ್ನ ಅಮೋಘ ಸೇವೆಯನ್ನು ಆ ಪರಿಸರಕ್ಕೆ ಸಲ್ಲಿಸಿದರು. ಇವರು ಪ್ರತಿದಿನ ಮನಸ್ಸು ಚಂಚಲಗೊಳ್ಳದಿರಲು ಯೋಗಾಸನವನ್ನು ಕಾಯಕವನ್ನಾಗಿ ಮಾಡಿಕೊಂಡಿದ್ದರು.

ಕಟ್ಟಾ ಗೌಡ ಅಭಿಮಾನಿಯಾದ ಇವರು ತಮ್ಮ ಜನಾಂಗದ ಮದುವೆ ಸಂದರ್ಭದಲ್ಲಿ, ಕಚ್ಚೆ ಪಂಚೆ, ಕೋಟು, ರುಮಾಲು ಧರಿಸಿ ಹೋಗುವ ರೀತಿ ಆಕರ್ಷಣೀಯವಾಗಿತ್ತು. ಇವರು ಚೆಟ್ಟಿಮಾನಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ವೇದಿಕೆಯನ್ನು ಹುಟ್ಟುಹಾಕಿ 1837ರ ಅಮರಸುಳ್ಯ ಕಾಟಕಾಯಿಯಲ್ಲಿ ಹೋರಾಡಿ ಹುತಾತ್ಮರಾದ ಸುಭೆದಾರ್ ಗುಡ್ಡೇರ

15ನೇ ಪುಟಕ್ಕೆ

ಗೌಡರ ವಿವಾಹ ಪದ್ಧತಿ

[ಹಿಂದಿನ ಸಂಚಿಕೆಯಿಂದ]

ಹೆ. ಕ. – ಆದರೆ, ರೂಪದಲ್ಲಿ ಮನ್ಮಥನಿಗೆ ಹೋಲುವ ನಿಮ್ಮ ಪುರುಷನು ನಮ್ಮ ಕನ್ಯೆಯನ್ನು ದೇವತಾ ಸಾಕ್ಷಿಯಾಗಿ ಪಾಣಿಗ್ರಹಣ ಮಾಡಿಲ್ಲವೊ ?

ಗಂ.ಕ. – ಹೌದು.

ಹೆ.ಕ. – ಆದರೆ ನಮ್ಮ ವರ್ಣಾಶ್ರಮದ ಧರ್ಮಕ್ಕನುಸಾರವಾಗಿಯೂ, ಕಾರ್ಯಕ್ರಮವಾಗಿಯೂ ನಡೆದ ಪಾಣಿಗ್ರಹಣ ಸಂಸ್ಕರಣಗಳಲ್ಲಿ ಅನೇಕ ವಿಷಯಗಳಲ್ಲಿ ತಪ್ಪುನೆಪ್ಪುಗಳು, ಕುಂದುಕೊರತೆಗಳು ಬಂದಿರಬಹುದು. ಇಂತಹ ನ್ಯೂನತೆಗಳನ್ನು ಮಹಾನುಭಾವರಾದ ಸಭಿಕರು, ಕರುಣಾಸಾಗರನಾದ ಭಗವಂತನಲ್ಲಿ ಕ್ಷಮಿಸಬೇಕೆಂದು ಕೇಳಿ ದೇವತಾಸಾಕ್ಷಿಯಾಗಿ ಕನ್ಯಾದಾನ ಮಾಡಿದ್ದೇವೆಯಲ್ಲವೋ?

ನಮ್ಮ ಕನ್ನಿಕೆಯ ನೆತ್ತಿ ಎಣ್ಣೆ ಆರಲಿಲ್ಲ, ಅಂಗೈ ಬರೆ ಮಾಜಲಿಲ್ಲಿ. ಅಂಗಾಲಿಗೆ ಧೂಳು ಸೋಕಲಿಲ್ಲ, ಮೃದುವಾದ ಬಾಲ್ಯ ಭಾಷೆಗಳಿಂದಲೂ, ಆಟಪಾಠಗಳಿಂದಲೂ ತಂದೆತಾಯಿಯರ ಮನಸ್ಸನ್ನು ಸಂತೋಷಗೊಳಿಸುತ್ತಾ ಬಾಲ್ಯವಸ್ಥೆಯನ್ನು ಮೀರದ ನಮ್ಮ ಮುದ್ದು ಬಾಲಕಿಯನ್ನು ಯಾವ ರೀತಿ ಸಾಕುವಿರಯ್ಯಾ ?

ಗ.ಕ. – [ಮೌನವಾಗಿ ನಿಂತುಕೊಳ್ಳುವರು]

ಹೆ.ಕ. – ನಮ್ಮ ಹೆಣ್ಣು ಮಾವನ ಗುಣವನ್ನು ಅರಿಯಳು, ಅತ್ತೆಯ ಅತಿಶಯವನ್ನು ತಿಳಿಯಳು, ಸಖಿಯರ ಗುಣದೋಷಗಳನ್ನು ಗ್ರಹಿಸಳು, ನಿರಂತರವೂ ಸೂರ್ಯನನ್ನು ಬಯಸುವ ತಾವರೆಯಂತೆಯೂ, ಚಂದ್ರನನ್ನು ನೆನೆಯುವ ನೈದಿಲೆಯಂತೆಯೂ, ಮಳೆಗಾಲವನ್ನು ಬಯಸುವ ಮತ್ಸ್ಯಕುಲದಂತೆಯೂ, ಕಾರ್ಮುಗಿಲನ್ನು ಬಯಸುವ ಬೆಳ್ಳಕ್ಕಿಯಂತೆಯೂ, ಮೇಘದೂತನಿಗೆ ಆಶೆಪಟ್ಟು ಪಂಪಾಸಾಗರದಲ್ಲಿ ತೇಲಾಡುತ್ತಿರುವ ಹಂಸದಂತೆ ಇರುವ ನಮ್ಮ ಮುದ್ದು ಬಾಲಕಿಯನ್ನು ರಕ್ಷಿಸಿಕೊಳ್ಳುವವರಾರಯ್ಯ ?

ಗ.ಕ. – ವರನಯ್ಯಾ.

ಹೆ.ಕ. - ನಮ್ಮ ಹೆಣ್ಣು ಸೂರ್ಯದೇವನಿಗೆ ಛಾಯಾದೇವಿ ಹೇಗೊ, ಚಂದ್ರನಿಗೆ ರೋಹಿಣಿದೇವಿ ಹೇಗೊ, ವಸಿಷ್ಠನಿಗೆ ಅರುಂಧತಿ ಹೇಗೊ, ಅಧಿಸೇನನಿಗೆ ಅನುಸೂಯಾ ದೇವಿ ಹೇಗೋ, ಸತ್ಯವಂತನಿಗೆ ಸಾವಿತ್ರಿದೇವಿ ಹೇಗೋ, ಶ್ರೀರಾಮಚಂದ್ರನಿಗೆ ಜಾನಕೀದೇವಿ ಹೇಗೋ ಹಾಗೆಯೇ ವಸಂತನಿಗೆ ತಂಗಾಳಿ ಬೀಸಿದಂತೆ, ಮನ್ಮಥನ ಮುಂದೆ ರತಿದೇವಿ ಸೇರಿದಂತೆ, ಈ ದಪಂತಿಗಳಲ್ಲಿ ಭಿನ್ನಭೇದ ಬಾರದಂತೆ ಹಿತೋಪದೇಶಗಳನ್ನು ಹೇಳಿ ಸರಿಪಡಿಸಿಕೊಳ್ಳುವವರಾರಯ್ಯ?

ಕೃಪೆ :

ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ

ಗ.ಕ – ವರನ ಹಿರಿಯರು.

ಹೆ.ಕ. - ನಮ್ಮ ಹೆಣ್ಣಿಗೆ ಊಟ ಮಾಡುವುದಕ್ಕೆ ಗಂಗಳವನ್ನೂ, ಕೈತೊಳೆಯುವುದಕ್ಕೆ ತಂಬಿಗೆಯನ್ನೂ, ಮಲಗುವುದಕ್ಕೆ ಯೋಗ್ಯವಾದ ರತ್ನ ಖಚಿತವಾದ ಮಂಚವನ್ನೂ, ಕರೆಯುವುದಕ್ಕೆ ಯೋಗ್ಯವಾದ ಗೋವಿನ ಹಿಂಡನ್ನೂ, ಉಡಿಗೆ ತೊಡಿಗೆಗಳನ್ನು ಕೊಟ್ಟುದಲ್ಲದೆ, ದ್ರವ್ಯವನ್ನೂ ಸಹ ಬಳುವಳಿಯಾಗಿ ಕೊಟ್ಟಿರುತ್ತೇವೆ. ಹೀಗೆ ಬಳುವಳಿಯಾಗಿ ಕೊಟ್ಟ ದ್ರವ್ಯವನ್ನು ಒಂದಕ್ಕೆ ಹತ್ತು, ಹತ್ತಕ್ಕೆ ನೂರು, ನೂರಕ್ಕೆ ಸಾವಿರ ಗಟ್ಟಲೆ ವೃದ್ಧಿಪಡಿಸಿಕೊಡುವವರು ಯಾರಯ್ಯಾ ?

ಗಂ.ಕ. – ವರನಯ್ಯಾ.

ಹೆ.ಕ. – ಅಯ್ಯಾ, ಮಹಾಶಯರೇ, ಬಾಲ್ಯಾವಸ್ಥೆಯಲ್ಲಿರುವ ನಮ್ಮ ಕನ್ನಿಕೆಯು ಅತ್ತೆ ಎಂಬ ಮಾತಿಗೆ ತಾಯಿ ಎಂತಲೂ, ಮಾವ ಎಂಬ ಶಬ್ದಕ್ಕೆ ತಂದೆ ಎಂತಲೂ, ಪತಿ ಎಂಬ ವಚನಕ್ಕೆ ಗತಿ ಎಂತಲೂ, ತಿಳಿದಿರುವಳು. ನಾವು ಕನ್ಯಾದಾನ ಮಾಡಿದ್ದಾಗ್ಯೂ, ಈ ದಂಪತಿಗಳು ಮಹಾನುಭಾವರಾದ ಸಭಿಕರ ಕರುಣಾಕಟಾಕ್ಷದಿಂದಲೂ, ದಯಾಸಾಗರನಾದ ಪರಮಾತ್ಮನ ಅನುಗ್ರಹದಿಂದಲೂ, ಪುತ್ರ ಪೌತ್ರ, ಪೌಪುತ್ರ ವಂಶಾಭಿವೃದ್ಧಿಯಾಗಿ ಬಾಳಲೆಂದೂ ಸರ್ವಸಂಪನ್ನ ಭಾಗ್ಯ ಸಮಭಿವೃದ್ಧಿಯಾಗಿ ಬಾಳಲೆಂದೂ ಚಂದ್ರಶೇಖರನಾದ, ಶ್ರೀಅಂಬಾಧರನಾದ ಬಾಲಗಂಗಾಧರನಾದ ಫಾಲ ನೇತ್ರನಾದ ಪಾರ್ವತಿರಮಣನು ಅನುಗ್ರಹಿಸಲಿ. ಅಲ್ಲದೆ ಬೆಳಗಿನ ಜಾವದಲ್ಲಿ ಬೆಳ್ಳಕ್ಕಿಯಂತೆ ಪ್ರಕಾಶಿಸುವ ಕುಂಭಿನಿಕಾಂತೆಯಳಂತೆ, ಸಂಧ್ಯಾರಾಗದಂತೆ, ಬಾಲಸೂರ್ಯನಂತೆ, ಹೊಳೆಯುವ ನವರತ್ನ ಕಿರೀಟಗಳಂತೆ ಪ್ರಜ್ವಲಿಸುವ, ಉದಯ ಪರ್ವತವನ್ನು ಹೋಲುವ ಸಿದ್ಧಿ ವಿಘ್ನೇಶ್ವರನು ವರ ಸೌಭಾಗ್ಯವನ್ನು ದಯಪಾಲಿಸಲಿ. ಅಲ್ಲದೆ ಅಹಿಣಿ ಮಹಿಣಿಯಾದ ಮಂಗಳ ದೂಘಂಟೆಯ ದಯೆಯಿಂದ ಈ ದಂಪತಿಗಳು ಆಯುರಾರೋಗ್ಯ ಸುಖ ಸಂಪನ್ನರಾಗಿ ಬಾಳಲೆಂದು ನಾವುಗಳೆಲ್ಲರೂ ಭಗವಂತನನ್ನು ಕುರಿತು ಪ್ರಾರ್ಥಿಸುವ.

ಹತ್ತು ಕುಟುಂಬ ಹದಿನೆಂಟು ಗೋತ್ರ ಕುಲಸ್ಥರ ಸಭೆ ಸಮಸ್ತರ ಸಂಗಡ ಕೇಳಿ ಈ ನವದಂಪತಿಗಳನ್ನು ದಿಬ್ಬಣದ ಮುಖ್ಯಸ್ತರಿಗೆ ವಹಿಸಿಕೊಡುವಂತೇವೆ...

ಸಭಿಕರೆಲ್ಲರೂ–ಒಳ್ಳೆಕಾರ್ಯವಂತೇವೇ ಎಂಬ ಘೋಷಣೆ ಕೂಗುವರು.

[ಮುಂದಿನ ಸಂಚಿಕೆಗೆ]

ಕೊಡಗು ಪ್ರಾಂತ್ಯವನ್ನು ಆಳಿದ ಗಂಗರಸರ ವಂಶದ ಸೊಸೆ ಮಹಾಸತಿ "ಹೊನ್ನಮ್ಮನ" ಕಥೆ

ಗಂಗರಸರು 2-3ನೇ ಶತಮಾನಕ್ಕಿಂತಪೂರ್ವದಿಂದಲೂ ಆಡಳಿತ ಮಾಡಿದ ದಾಖಲೆಗಳಿವೆ ಮತ್ತು ಶಿಲಾಶಾಸನಗಳು ಇವೆ. ಗಂಗ ವಂಶಕ್ಕೆ ಸೇರಿದ ಗಂಗರ ಹತ್ತಿರದ ಸಂಬಂಧಿಕರಲ್ಲಿ ಒಬ್ಬ ಗೌಡನ ಸೊಸೆಯಾದ ಮಹಾಸತಿ ಪತಿವ್ರತೆಯೇ ಹೊನ್ನಮ್ಮ.

ಹೊನ್ನಮ್ಮನ ಕೆರೆ

ಕೊಡಗು ಪ್ರಾಂತ್ಯವು ಗಂಗರಸರ ಆಳ್ವಿಕೆಯಲ್ಲಿ ಇತ್ತು ಎಂದು ಈಗಾಗಲೇ ತಿಳಿದಿರುತ್ತದೆ. ಗಂಗರ ಕಾಲದಲ್ಲಿ ದೇಶ ಸುಭಿಕ್ಷವಾಗಿತು. ಗಂಗರಸರ ಸಂಬಂಧಿಕರು ಅನೇಕರು ಕೊಡಗು ಪ್ರಾಂತ್ಯದ ಪ್ರತಿನಿಧಿಗಳಾಗಿ ಆಡಳಿತವನ್ನು ಉತ್ತಮವಾಗಿ ನಡೆಸಿದ್ದಾರೆ. ಹಾನನಹಳ್ಳಿ ಎಂಬ ಗ್ರಾಮ. ಈ ಗ್ರಾಮದ ಸುತ್ತಾಮುತ್ತಾ ತೆಂಗು, ಅಡಿಕೆ, ಬಾಳೆ, ಹಲಸು ಮಾವು ಮುಂತಾದ ಫಲ ವೃಕ್ಷಗಳು ಹುಲುಸಾಗಿ ಬೆಳೆದಿದ್ದವು. ಹೊಲಗದ್ದೆಗಳು ಸಹ ತುಂಬಾ ಫಲಭರಿತವಾಗಿ ಬೆಳೆದಿದ್ದವು. ಆ ಗ್ರಾಮಕ್ಕೆ ಗಡಿನಾಡ ಪಾಳೆಯಗಾರನಾಗಿದ್ದ ಗಂಗರಸರಿಗೆ ಸಾಮಂತನಾಗಿದ್ದುಕೊಂಡು ಕೋಟೆ ಅರಮನೆಗಳನ್ನು ಕಟ್ಟಿಕೊಂಡಿದ್ದನು ಮತ್ತು ಕಷ್ಟಕಾಲದಲ್ಲಿ ಸಹಾಯ ನೀಡುತ್ತಿದ್ದನು.

ರಾಜ್ಯದಲ್ಲಿ ಎಲ್ಲರೂ ಸುಖಸಂತೋಷದಿಂದಿರಲು, ಅನಿರೀಕ್ಷಿತವಾಗಿ ರಾಜ್ಯಕ್ಕೆ ಯುದ್ಧ ಮಾಡುವ ಸ್ಥಿತಿ ಬಂತು. ಆಗ ಸುತ್ತಮುತ್ತಲ ಯಜಮಾನರು, ಜನಾಂಗವನ್ನು ಕೂಡಿಹಾಕಲು ಅರಸನು ಆದೇಶ ಕಳುಹಿಸಿದನು. ವಯಸ್ಸಾದ ತಂದೆಯನ್ನು ಯುದ್ಧಕ್ಕೆ ಕಳುಹಿಸಲು ಒಪ್ಪದೆ, ಮಗನಾದ ಶಿವಯ್ಯನು ಊರಿನ ತರುಣರನ್ನು ಸೇರಿಸಿಕೊಂಡು ಊರಿನವರನ್ನು ತಂದೆಯ ಅನುಮತಿ ಪಡೆದು ಯುದ್ಧಕ್ಕೆ ಹೊರಡಲು ಸಿದ್ಧನಾದರು.

ನಿಗಧಿಪಡಿಸಿದ ದಿನ ಎಲ್ಲರೂ ಊರ ದೇವಸ್ಥಾನದ ಬಳಿ ಸೇರಿ ಪೂಜೆ ಮಾಡಿ ಜನಗಳಿಗೆ ಪ್ರಸಾದ ಹಂಚಿದರು. ಗೌಡನು ದಂಡನಾಯಕನಾಗಿ ಹೊರಡುವ ಸಮಯದಲ್ಲಿ, ಹೊನ್ನಮ್ಮ ಆರತಿ ಎತ್ತಿ ತಿಲಕ ಇಟ್ಟು ವಿಜಯಮಾಲೆಯನ್ನು ಕೊಂಡು ಬನ್ನಿ ಎಂದು ಹಾರೈಸಿದಳು. ನವಮಾಸ ತುಂಬಿದ ಗರ್ಭಿಣಿ ಹೆಂಡತಿಯನ್ನು ಒಂದೆರಡು ಕ್ಷಣ ನೋಡಿ, ತಂದೆ ತಾಯಿ ಅಣ್ಣಂದಿರಿಗೆ ನಮಸ್ಕಾರ ಮಾಡಿ ಕುದುರೆ ಏರಿ ದಂಡಿನೊಡನೆ ಹೊರಟುಹೋದನು. ನಂತರದ ದಿನಗಳಲ್ಲಿ ಹೊನ್ನಮ್ಮನಿಗೆ ಗಂಡು ಮಗನ ಜನನವಾಯಿತು. ಮೊಮ್ಮಗನನ್ನು ಪಡದ ಗೌಡನು ಬಹಳ ಸಂತೋಷಪಟ್ಟನು. ಊರಿಗೆಲ್ಲಾ ಔತಣವನ್ನು ಏರ್ಪಡಿಸಿದನು.

ಯುದ್ಧಕ್ಕೆ ಹೋದ ಶಿವಯ್ಯನು ಎರಡು ವರ್ಷವಾದರೂ ಮರಳಿ ಬಂದಿರಲಿಲ್ಲ. ಗಂಗರಸರ ಭೀಕರ ಹೋರಾಟ ಹಲವಾರು ವರ್ಷಗಳು ಆದರೂ ನಿಲ್ಲಲಿಲ್ಲ. ಹೋದ ತರುಣರು ಬಾರದಿದ್ದುದರಿಂದ ಊರಿನಲ್ಲಿ ವ್ಯವಸಾಯ ಮಾಡುವವರಿಲ್ಲದೆ ಕಣಜಗಳು ಬರಿದಾದವು. ಬೆಳೆಯನ್ನು ಬೆಳೆಯಲು ಜನರಿಲ್ಲದೆ ಊರ ಜನರ ಸ್ಥಿತಿ ಚಿಂತಾಜನಕವಾಯಿತು. ಅಲ್ಲದೆ ಮಳೆಗಾಲವೂ ಕೂಡ ಬರಲಿಲ್ಲ. ಬೆಳೆಗಳು ಒಣಗಿ ಹಾಳಾದವು. ಕುಡಿಯಲು ನೀರಿಲ್ಲದೆ. ಜನರು ಕಂಗಾಲಾದರು. ಆ ಸಮಯದಲ್ಲಿ ಊರ ಜನರು ಅರಸರ ಬಳಿಗೆ ಬಂದು ಬೇಡಿಕೊಂಡರು. ಆಗ ತನ್ನಲ್ಲಿದ್ದ ಸಂಪತ್ತನ್ನೆಲ್ಲಾ ಜನಗಳಿಗೆ ಹಂಚಿದಲ್ಲದೆ, ಊರ ಜನರ ಅನುಕೂಲಕ್ಕಾಗಿ ಒಂದು ಕೆರೆ ತೋಡಿಸಲು ಕೆಲಸಗಾರರಾದ ವಡ್ಡರನ್ನು ಕರೆಸಿ ಕೆಲಸ ಪ್ರಾರಂಭಿಸಿದನು. ತಿಂಗಳಾನುಗಟ್ಟಲೆ ಕೆಲಸ ನಡೆದ ನಂತರ ಗಂಗೆಯು ಕಾಣಿಸಿತು. ಗಂಗೆಯನ್ನು ನೋಡಲು ಅರಸು ಮನೆತನದ ಹೆಂಗಸರು ಬಂದು ನೋಡಿ ಹೋಗುತ್ತಿದ್ದರು. ಆಗ ಕೆಲಸ ನಿರ್ವಹಿಸುತ್ತಿದ್ದ ವಡ್ಡರವನು ಕಾಮುಕಾ ದೃಷ್ಟಿಯಿಂದ ನೋಡುತ್ತಿದ್ದನು. ಒಂದು ದಿನ ಅರಸನ ಕಿರಿಯ ಸೊಸೆ ಹೊನ್ನಮ್ಮನ ಮೇಲೆ ಆತನ ವಕ್ರದೃಷ್ಟಿ ಬಿತ್ತು. ಆಕೆಯ ಸೌಂಧರ್ಯ ಆತನನ್ನು ಹುಚ್ಚು ಹಿಡಿಸಿತು. ಒಂದು ದಿನ ಹೊನ್ನಮ್ಮನು ದೇವಸ್ಥಾನಕ್ಕೆ ಹೋಗಿ ಬರುತ್ತಿರಲು ಜೊತೆಯಲ್ಲಿದ್ದ ಹೆಂಗಸರು ಹಿಂದು ಮುಂದಾಗಿ ಬಂದಿದ್ದರು. ಹೊನ್ನಮ್ಮನೊಬ್ಬಳೇ ಹಿಂದೆ ನಿಧಾನವಾಗಿ ಬರುತ್ತಿದ್ದಳು. ಒಬ್ಬಂಟಿಯಾಗಿ ಬರುತ್ತಿದ್ದ ಹೊನ್ನಮ್ಮಳನ್ನು ನೋಡಿದ ಈ ವಡ್ಡರವನು ಆಕೆಯನ್ನು ಹೇಗಾದರೂ ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ಆತನ ಬಲವಂತಕ್ಕೆ ಒಪ್ಪದ ಚತುರೆಯೂ, ಬುದ್ಧಿವಂತಳೂ ಆದ ಹೊನ್ನಮ್ಮಳು ಬೇಗ ಮನೆ ಸೇರಿಕೊಂಡಳು. ಕೆರೆ ಕೆಲಸ ಮಾಡುತ್ತಿದ್ದ ವಡ್ಡರವನು ಕೆರೆ ಕೆಲಸ ನಿಲ್ಲಿಸಿ ತೊಂದರೆಕೊಟ್ಟು ಕಾಮುಕ ಚಪಲ ತೀರಿಸಿಕೊಳ್ಳಲು ಮನಸ್ಸು ಮಾಡಿ ಆ ಕೆರೆ ಕೆಲಸನನ್ನು ಸೇಡಿನಿಂದ ನಿಲ್ಲಿಸಿದನು. ಅರಸನು ವಡ್ಡವರನ್ನು ಕರೆಸಿ, ಕೆಲಸವೇಕೆ ನಿಂತು ಹೋಗಿದೆ, ಕೆಲಸವನ್ನು ಮುಂದುವರೆಸಿರೆಂದು ವಿಚಾರಿಸಲು, ಅದಕ್ಕೆ ವಡ್ಡರವನು ಸ್ವಾಮಿ ನೀರಿನ ಬುಗ್ಗೆಯು ಸಿಗಬೇಕಾದರೆ ನರಬಲಿ ಬೇಕು. ನಿಮ್ಮ ಎಂಟನೇ ಮಗನ ಹೆಂಡತಿ ಒಂದು ಮಗುವಿನ ತಾಯಿಯಾದವಳೇ ಎಂದು ತಿಳಿ

ಈ ವಿಚಾರ ಕೇಳಿದ ಅರಸನು ಚಿಂತಾಕ್ರಾಂತನಾದನು ಪಚಾರಗಳನ್ನು ಬಿಟ್ಟು ಯೋಚನೆಯಲ್ಲಿ ತೊಡಗಿ ಮಹಾ ಪತಿವ್ರತೆಯರುಗಳಾದ ಸೊಸೆ ಯೋಚನೆ ಮಾಡತೊಡಗಿದರು. ಆ ಕಡೆ ಅರಸರ ಬಗ್ಗೆ ಅಪಪ್ರಚಾರವನ್ನು ಮಾಡ ು. ಇದನ್ನು ಕೇಳಿ ಊರ ಜನರೆಲ್ಲಾ ಅರಸರ ಬಗ್ಗೆ ತ್ತಿದರು. ಹೇಗೊ ತನ್ನ ಮಗನಿಗೆ ಬೇರೆ ಮಾಡಬಹುದು. ಪ್ರಜೆಗಳ ಹಿತಕ್ಕಾಗಿ ತನ್ನ ಸೊಸೆ ಲಿ ಕೊಟ್ಟರೇನಂತೆ ಎನ್ನುತ್ತಾ ಪ್ರಜೆಗಳು ಅರಸ ದಿಸುತ್ತಿದ್ದರು. ಜನರಿಗೆ ನೀರಿಲ್ಲದೆ ಪಡಬಾರದ ಳು ಆಗಿದ್ದವು. ಸದರಿ ವಿಚಾರ ಉಳಿದ ಗೌಡನುಕ್ಕ ಸೆಯರಿಗೂ ತಿಳಿಯಿತು. ತಂದೆಗೆ ಹೆದರಿ ಯಾರಿಗೂ ಮಾಡದೆ ಸುಮ್ಮನಿದ್ದರು. ಹೊನ್ನಮ್ಮಳು ಇಷ್ಟು ರಊ ತನ್ನ ಗಂಡ ಬಾರದಿರುವಿಕೆಗೆ ದುಃಖಿತಳಾ ಊರು ಗೌಡನು ಪ್ರಜೆಗಳ ಸ್ಥಿತಿ ನೋಡಿ ಮಾತುಗಳಿಂದಬೇಸತ್ತು ಪ್ರಜೆಗಳ ಕಷ್ಟಕಾಲ ಕೂಲತೆಗಳನ್ನು ಮಾಡಿಕೊಡದೆ ಹೋದರೆ ನಾನಿದ್ದು ಪ್ರಯೊಜನ ಎಂದು ಆಲೋಚಿಸಿ ಹೊನ್ನಮ್ಮಳನು ವಡ್ಡರವನ ಅಪೇಕ್ಷೆಯಂತೆ ಲು ನಿರ್ಧರಿಸಿದನು. ಮಗ ಶಿವಯ್ಯನು ಇಷ್ಟು ೂ ಬರಲಿಲ್ಲ. ಇನ್ನು ಕಾಯುವುದು ಪ್ರಯೋಜನ ತಿಳಿದು, ತನ್ನ ಹೆಂಡತಿಯು ಮುಖಾಂತರ ನ್ನು ಸೊಸೆಗೆ ತಿಳಿಸಿದನು. ಅವಳು ಸಂತೋಷದಿಂದ ಾಗಿ ತ್ಯಾಗಮಾಡಲು ಒಪ್ಪಿದಳು. ಅವಳಿಗೆ ಮದುವೆ ದಿದ್ದ ಧಾರೆ ಸೀರೆಯನ್ನು, ಬಟ್ಟೆ, ಒಡವೆಗಳನ್ನು ರು. ಅರಿಸಿನ ಕುಂಕುಮವನ್ನು ಇಟ್ಟರು. ಹೊನ್ನಮ್ಮನ ಚಿನ್ನದ ಕೊಡವನ್ನು ಕೊಟ್ಟು, ಹೊಸ ಕೆರೆಗೆ ೀರು ತರಲು ಕಳುಹಿಸಿದರು. ಮಹಾಸತಿ ಹೊನ್ನ ನ್ನ ಅಳಿಗಾಲ ಬಂದಿದೆ ಎಂದು ತನ್ನ ಮಗನನ್ನು ಂದ ಕೈ ಆಡಿಸಿ ದುಃಖದಿಂದ ತನ್ನ ಮನಸ್ಸಿನಲ್ಲಿ ನಿನ್ನ ರುದ್ಧದಿಂದ ಬರುವವರೆಗೆ ನಿದ್ರಿಸುತ್ತಿರು ಮಗನೇ ೊಂಡು ಹರಸಿದಳಲ್ಲದೆ, ಹಾಕಿದ ಬಾಗಿಲು ತೆಗೆಯದಿರ ಹೊಸಿಲ ಬಳಿ ಬಂದು ಬಾವಂದಿರಿಗೂ ಅತ್ತಿಗೆಯು ನಮಸ್ಕರಿಸಿ ಕೆರೆ ಕಡೆ ಹೊರಟಳು.

ೂಸೆ ಹೊನ್ನಮ್ಮ ಕೆರೆ ಕಡೆ ಹೋಗುತ್ತಿದ್ದಾಗ ಎರಡು ಬದಿಯಲ್ಲಿ ಜನರು ನಿಂತು ಆಶೀರ್ವದಿಸಿ ಹೊನ್ನಮ್ಮ ಕೆರೆಯ ಹತ್ತಿರಕ್ಕೆ ಬಂದಳು. ನಿಂತು ಳು. ಪ್ರಜೆಗಳಿಗೆ ಬೇಕಿದ್ದನೀರಿಗಾಗಿ ಮೆಟ್ಟಲುಗಳನ್ನು ಮ್ಮಾ ಎಂದು ತಿಳಿಸಿದರು. ಹೊನ್ನಮ್ಮ ಒಂದು ಮೆಟ್ಟಲನ್ನು ಇಳಿದಳು, ಕಾಲುಗಳನ್ನು ನೀರಿನೊಳಗೆ ಇಟ್ಟಳು. ಹಾಗೆಯೇ ಒಂದೊಂದೆ ಮೆಟ್ಟಲು ಇಳಿಯುತ್ತಿದ್ದಂತೆ ನೀರು ತುಂಬುತಿತ್ತು. ಕೊನೆಯ ಮೆಟ್ಟಲಿನಿಂದ ದೇವರನ್ನು ಪ್ರಾರ್ಥಿಸಿ ನೀರಿನೊಳಗೆ ಮಾಯವಾದಳು. ಗಂಗೆಯು ಹೊನ್ನಮ್ಮಳನ್ನು ಸ್ವೀಕರಿಸಿತು. ಮಹಾಸತಿ ಹೊನ್ನಮ್ಮನ ಪಾದಸ್ಪರ್ಶದಿಂದ ಗಂಗೆ ಉಕ್ಕಿ ಮೇಲೆರಿದಳು. ಹೊನ್ನಮ್ಮ ಗಂಗೆಯಲ್ಲಿ ಲೀನ ವಾದಳು. ತದನಂತರ ಈ ಕೆರೆಗೆ ಹೊನ್ನಮ್ಮನ ಕೆರೆ ಎಂದು ಹೆಸರಾಯಿತು. ಅನಂತರ ಕೆರೆಯ ಉಳಿದ ಕೆಲಸವನ್ನು ಪೂರ್ಣಗೊಳಿಸಿ ಪ್ರಜೆಗಳ ಕಷ್ಟ ತೊಂದರೆಗಳು ದೂರವಾಗಿ ದೇಶವು ಸುಭಿಕ್ಷದಿಂದ ಇರಲು ಅನುಕೂಲವಾಯಿತು. ಗ್ರಾಮದ ಜನರು ಕೆರೆಯ ಏರಿಯಾ ಮೇಲೆ ಹೊನ್ನಮ್ಮಳ ದೇವಸ್ಥಾನವನ್ನು ಕಟ್ಟಿಸಿದರು. ಹೊನ್ನಮ್ಮ ಮತ್ತು ಗಂಡ ಶಿವಯ್ಯನವರನ್ನು ಶಿವಪಾರ್ವತಿಯರೆಂದು ಈಗಲೂ ಪೂಜಿ ಸುತ್ತಿದ್ದಾರೆ. ಇಂತಹ ಮುಕುಟಮಣಿ ರತ್ನದಂತೆ ಇತಿಹಾಸ ದಲ್ಲಿ ಒಕ್ಕಲಿಗರ ಆಧಿಶಕ್ತಿಯಂತೆ ಜನರ ಮನದಲ್ಲಿ ಶೋಭಾ ಯಮಾನವಾಗಿದ್ದಾಳೆ ಈ ಹೊನ್ನಮ್ಮ.

ಈಗಲೂ ಕೊಡಗು ಪ್ರಾಂತ್ಯದಲ್ಲಿಯೂ, ಪಿರಿಯಾಪಟ್ಟಣ ತಾಲ್ಲೋಕಿನಲ್ಲಿಯೂ ಹೊನ್ನಮ್ಮನ ಕುಟುಂಬದವರು, ಹೊನ್ನಮ್ಮನ ವಟಾರದವರು, ಹೊನ್ನಮ್ಮನ ವರ್ಗದವರು ಎಂದು ಕರೆದುಕೊಳ್ಳುವ ಜನರಿದ್ದು, ತಮ್ಮ ಮನೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗೆ ಹೊನ್ನಮ್ಮ ಎಂದು ಹೆಸರಿಡುವ ಪದ್ಧತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

○ **ಟಿ. ಆರ್. ಮುದ್ದೇಗೌಡ** ಮೈಸೂರು

ಸೌರವ್ಯೂಹ

ಸೂರ್ಯನ ವ್ಯಾಸ : 1392000 ಕಿ.ಮೀ.ಗಳು
ಸೂರ್ಯನ ಉಷ್ಣತೆ : 6000 ಡಿಗ್ರಿ ಸೆಂಟಿಗ್ರೇಡ್
ಭೂಮಿಯಿಂದ ದೂರ : 93 ದಶಲಕ್ಷ ಮೈಲಿಗಳು
ಚಂದ್ರನ ವ್ಯಾಸ : 3476 ಕಿ. ಮೀ.
ಬುಧಗ್ರಹದ ವ್ಯಾಸ : 4880 ಕಿ.ಮೀ.
ಗುರುಗ್ರಹ : ದೊಡ್ಡಗ್ರಹ
ಶುಕ್ರಗ್ರಹದ ವ್ಯಾಸ : 12104 ಕಿ.ಮೀ.
ಮಂಗಳಗ್ರಹದ ವ್ಯಾಸ : 6787 ಕಿ.ಮೀ.
ಭೂಮಿಯಿಂದ ದೂರ : 80 ದಶಲಕ್ಷ ಕಿ.ಮೀ.
ಭೂಮಿಯಿಂದ ಶನಿಗ್ರಹಕ್ಕೆ ದೂರ–1275 ದಶಲಕ್ಷ ಕಿ.ಮೀ.
ಯುರೇನೆಸ್‌ನ ವ್ಯಾಸ–5800 ಕಿ.ಮೀ.
ನೆಪ್ಚ್ಯೂನ್ ಭೂಮಿಯಿಂದ ದೂರ 4497 ದಶಲಕ್ಷ ಕಿ.ಮೀ.
ಪ್ಲೂಟೊದ ವ್ಯಾಸ–6000 ಕಿ.ಮೀ.

ಸಂಗ್ರಹ : **ಅಂಬ್ರಾಟ ಭಗವತಿಪ್ರಸಾದ್ ತಮ್ಮಯ್ಯ,**

ಅನ್ಯ ಸಂಸ್ಕೃತಿಯ ದಾಳಿಯನ್ನು ಎದುರಿಸಿ ಕನ್ನಡ ಸಾಹಿತ್ಯ ಬೆಳೆದು ಬಂದ ರೀತಿ

ಮೈಸೂರು ರಾಜ್ಯ 1956ರಲ್ಲಿ ಅಸ್ತಿತ್ವಕ್ಕೆ ಬಂತು. ಕನ್ನಡವೇ ಪ್ರಧಾನವಾಗಿ ಆಡುನುಡಿಯಾಗಿರುವ ಎಲ್ಲಾ ಭಾಗಗಳು ಹೆಚ್ಚು ಕಡಿಮೆ ಮೈಸೂರು ರಾಜ್ಯದಲ್ಲಿ ಸೇರಿವೆ. ಕನ್ನಡ ಆಡುನುಡಿಯಾಗಿರುವ ಕೇವಲ ನೆರೆ ಪ್ರದೇಶಗಳು ಈ ಗಡಿಯ ಆಚೆಗೆ ಉಳಿದಿವೆ ಎಂಬುವುದು ನಿಜ. ಆದರೆ ರಾಜ್ಯದ ಈಗಿನ ಗಡಿಯೊಳಗಿರುವ ಕೆಲವು ಭಾಷೆಗಳ ಬಗ್ಗೆ ಅನ್ಯಭಾಷೆಗಳ ಪರವಾಗಿಯೋ [ವಿಶೇಷವಾಗಿ ಮರಾಠಿ ತೆಲುಗುಗಳ ಪರವಾಗಿ] ಇಂತದೆ ನ್ಯಾಯುದ ಮಾತು ಎದ್ದಿದೆ. ಅನೇಕ ಭಾಷೆಗಳಿರುವ ಭಾರತದಂತಹ ವಿಶಾಲ ರಾಷ್ಟ್ರದಲ್ಲಿ ಇಂತಹ ಪರಿಸ್ಥಿತಿ ತೀರ ಅನಿವಾರ್ಯವಾದುದು. ಭಾಷೇತರವಾದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆಯೋ ಪ್ರಾಂತ್ಯ ನಿರ್ಮಾಣ ಮಾಡಿದರೂ ಭಾಷೆಯ ಗಡಿಗಳನ್ನು ಅಡ್ಡ ಹಾಯುವ ದ್ವಿಭಾಷ ಪದ್ಧತಿಯೂ ಇದ್ದೇ ಇರುತ್ತದೆ. ಕರ್ನಾಟಕದಲ್ಲಿ ಸುಮಾರು 170 ಭಾಷೆಗಳಿರುತ್ತವೆ.

ಕನ್ನಡ ಭಾಷೆಯನ್ನು ಕುರಿತು ಅನೇಕ ನಿಷ್ಪತಿಗಳನ್ನು ಹೇಳಲಾಗಿದೆ. ಭಾಷಾಶಾಸ್ತ್ರದ ವೃಷ್ಟಿಯಿಂದ ಹೆಚ್ಚು ಸಂಭಾವ್ಯವಾದ ಮೂಲ ರೂಪವೆಂದರೆ "ಕರಿಯ ನೆಲ" ಎಂಬ ಅರ್ಥಕೊಡುವ ಕರ್-ನಾಡು ಎಂಬ ಪದ. ಇದೇ ಸಂಸ್ಕೃತೀಕರಣಗೊಂಡು ಕರ್ನಾಟಕ ಎಂಬುದಾಗಿ ನಾಡು, ನುಡಿ ಎರಡನ್ನೂ ಸೂಚಿಸುವ ಪದವಾಯಿತು. ಕನ್ನಡ ಎಂಬುವುದು ಕರ್ನಾಟಕ ಎಂಬ ಪದದ ಕ್ರಮಬದ್ಧ ಬೆಳವಣಿಗೆಯಾಗುತ್ತದೆ.

ಕನ್ನಡ ಭಾಷೆಯು ಒಂದು ಸ್ವತಂತ್ರ ಭಾಷೆಯಾಗಿ ಬೆಳೆದ ಮೇಲೆ ಅನೇಕ ಶತಮಾನಗಳ ಕಾಲ ಲಿಖಿತ ರೂಪಕ್ಕಿಳಿಯದೆ ಕೇವಲ ಆಡುನುಡಿಯಾಗಿಯೇ ಉಳಿದಂತೆ ತೋರುತ್ತದೆ. ಸುಮಾರು ಕ್ರಿ.ಶ. 450ರ ಹಲ್ಮಿಡಿ ಶಾಸನವು ಸದ್ಯಕ್ಕೆ ಲಭ್ಯವಾಗಿರುವ ಅತ್ಯಂತ ಪ್ರಾಚೀನವಾದ ಕನ್ನಡ ಲೇಖನವಾಗಿದೆ. ಮೂರನೆಯ ಶತಮಾನದ ಅಶೋಕನ ಶಿಲಾಶಾಸನದಲ್ಲಿರುವ 'ಇಸಿಲಿ' ಎಂಬ ಪದ ಕನ್ನಡವೆಂದು ಕೆಲವರು ಅಭಿಪ್ರಾಯ ಪಟ್ಟರು ಅದು ತಮಿಳಿನ ಎಯಿಲ್ ಎಂಬ ಶಬ್ದಕ್ಕೆ ಕೋಟೆ ಎಂಬ ಅರ್ಥವಿದ್ದು ಅದರ ಜಾತಿ ಶಬ್ದವಾದ ಕನ್ನಡ ಎಸಿಲ್ ಎಂಬ ಶಬ್ದವೇ ಆರ್ಯೀಕರಣಗೊಂಡು ಇಸಿಲಿ ಎಂಬ ರೂಪ ತಾಳಿದೆ ಎಂದು ಕೆಲವರು ಪ್ರತಿಪಾದಿಸಿದ್ದಾರೆ.

ನಂತರ ಲಭ್ಯವಾಗಿರುವ ಅತ್ಯಂತ ಹಳೆಯ ಗ್ರಂಥ ಎಂದರೆ ಕವಿರಾಜ್ಯ ಮಾರ್ಗ ಇದರಲ್ಲಿ ಸಾಕಷ್ಟು ಕನ್ನಡ ಪದಗಳಿದ್ದರೂ ಅದು ತಮಿಳು ಭಾಷೆಯ ಸಂಬಂಧವನ್ನು ಹೊಂದಿರುವುದು ಕಂಡುಬರುತ್ತದೆ.

ಪೂರ್ವದ ಹಳೆಗನ್ನಡ ಸ್ಥಿತಿಯಿಂದ ಭಾಷೆಯು ಕ್ರಮೇಣ ಬದಲಾಯಿಸುತ್ತಾ ಬಂತು. ಸುಮಾರು ಎಂಟನೆಯ ಶತಮಾನಕ್ಕೆ ಅದು ತನ್ನ ಹಳೆಯ ವೈಶಿಷ್ಟ್ಯವನ್ನು ಕೊಡವಿಕೊಂಡು ಬಂತು.

ಹನ್ನೆರಡನೆ ಶತಮಾನದಲ್ಲಿ ನಾಗವರ್ಮ ರಚಿಸಿದ ತನ್ನ ಶಬ್ಧಸ್ಮೃತಿ ಎಂಬ ಗ್ರಂಥದಲ್ಲಿ ಹಳೆಗನ್ನಡದ ವ್ಯಾಕರಣವನ್ನು ಬಳಸಿರುವುದನ್ನು ನೋಡಿದಾಗ ಅದು ತನ್ನ ಹಳೆಯ ಭಾಷೆಗೆ ತಿರುಗಿಬಿತ್ತು. ನಂತರ ಅದೇ ರೀತಿ ಕೇಶಿರಾಜನ ಶಬ್ಧಮಣಿ ದರ್ಪಣದಲ್ಲಿಯೂ ಸಹ ಮತ್ತೆ ಹಳೆಗನ್ನಡ ವ್ಯಾಕರಣ ಅಡಕವಾಗಿದೆ. ಇದಾದ ನಂತರ 1604ರಲ್ಲಿ ಭಟ್ಟಾಕಳಂಕನ ಶಬ್ಧಾನುಶಾಸನವು ಹಳೆಗನ್ನಡದ ಲಕ್ಷಣವನ್ನು ಹೊಂದಿದೆ.

ನಡುಗನ್ನಡ ಹೊಸಗನ್ನಡ ಎರಡೂ ಸಂಧಿಕಾಲದಲ್ಲಿ ಸಹಜವಾಗಿಯೇ ತುಂಬಾ ಧೀರ್ಘವಾದುದಾಗಿದೆ. ನಡುಕನ್ನಡ ಯಾವಾಗ ಹೊಸಗನ್ನಡವಾಯಿತೆಂದು ಕಂಡುಹಿಡಿಯಲು ಸಾಧ್ಯವಿಲ್ಲ.

ಕ್ರಿ.ಶ. 1799ರಲ್ಲಿ ಟಿಪ್ಪು ಸುಲ್ತಾನನ ಪತನವಾಗಿ ಮೈಸೂರು ಸಿಂಹಾಸನ ಮುಮ್ಮಡಿ ಕೃಷ್ಣರಾಜ ಒಡೆಯರ ವಶಕ್ಕೆ ಬಂದ ಮೇಲೆ ಆಸ್ಥಾನದಲ್ಲಿ ಹೊಸಗನ್ನಡ ಗ್ರಾಂಥೀಕ ಭಾಷೆಯಾಗಿ ರೂಪುಗೊಂಡಿತು

ಹೊಸಗನ್ನಡದಲ್ಲಿ ಸ್ಪಷ್ಟವಾದ ಮೂರು ಪ್ರಾಂತೀಯ ಬೇಧಗಳಿದ್ದು ಅವುಗಳಿಗೆ ಮೈಸೂರು ಕನ್ನಡ, ಧಾರವಾಡ ಕನ್ನಡ ಮತ್ತು ಮಂಗಳೂರು ಕನ್ನಡವೆಂಬ ಹೆಸರು ಜನಸಾಮಾನ್ಯವಾಗಿದೆ. ನಾಡಿನ ಉದ್ದಗಲಕ್ಕೂ ಹಲವಾರು ಭಾಷೆಗಳಿದ್ದರೂ ಶಿಷ್ಟ ಕನ್ನಡ ಮಾತ್ರ ರಕ್ಷಿತವಾಗಿ ನಾಡಿನಾದ್ಯಂತ ಬೆಳೆದು ಬಂದಿದೆ.

ದ್ರಾವೀಡ ಭಾಷೆಯಿಂದ ಬಂದ ಕನ್ನಡದಂತೆ ಪ್ರಾಂತೀಯ ಭಾಷೆಯಾಗಿ ಇನ್ನೂ ಉಳಿದಿರುವ ಎರಡು ಭಾಷೆಯೆಂದರೆ, ಕೊಡವ ಮತ್ತು ತುಳು.

ಅನೇಕ ಶತಮಾನಗಳಿಂದಲೂ ಕನ್ನಡದೊಡನೆ ಆಪ್ತ ಸಂಬಂಧವನ್ನು ಬೆಳಸಿಕೊಂಡು ಬಂದ ತಮಿಳು, ತೆಲುಗು ಮತ್ತು ಮಲೆಯಾಳಗಳಂಥ ಹಿರಿಯ ದ್ರಾವೀಡ ಭಾಷೆಗಳ ವಿಷಯವನ್ನಾಗಲೀ ಕರ್ನಾಟಕದಲ್ಲಿ ಬಳಕೆಯಲ್ಲಿರುವ ಅವುಗಳ ಕೆಲವು ಭಾಷಾಭೇದಗಳ ಬಗ್ಗೆಯಾಗಲೀ ಸಂಕ್ಷಿಪ್ತವಾಗಿ ಬರೆಯುವುದು ಕಷ್ಟ. ಕನ್ನಡದೊಡನೆ ಬಹುಕಾಲ ನಿಕಟ ಸಂಪರ್ಕ ಪಡೆದಿರುವ ಸಂಸ್ಕೃತ ಪ್ರಾಕೃತಗಳು, ಮರಾಠಿ, ಹಿಂದಿ-ಉರ್ದು ಇತ್ಯಾದಿ ಇಂಡೋ ಆರ್ಯನ್ ಭಾಷೆಗಳ ವಿಷಯವೂ ಬಹಳಷ್ಟು ಇದೆ. ಕೊಂಕಣಿ ಭಾಷೆಯನ್ನಾಡುವ. ಜನರು ಸುಮಾರು 37ರಷ್ಟು ಕರ್ನಾಟಕದಲ್ಲಿ ಇದ್ದಾರೆ. ಕೊಂಕಣಿ ಭಾಷೆ ಮರಾಠಿ ಮತ್ತು ಗುಜ

ರಾತ್' ಭಾಷೆಯು ಸಂಬಂಧವನ್ನು ಹೊಂದಿದೆ. ಕೊಂಕಣಿಯವರು ಕನ್ನಡ ಭಾಷೆಯನ್ನು ಪೋಷಿಸಿ ಬೆಳೆಸಿದ್ದಾರೆ. ಪಂಜೆ ಮಂಗೇಶರಾಯ್ ಮತ್ತು ದಿ|| ಎಂ. ಗೋವಿಂದ ಪೈ ಮೊದಲಾದವರು ಸಾಹಿತ್ಯವನ್ನು ಬೆಳೆಸಿದ್ದಾರೆ.

ಈಗ ಕನ್ನಡ ಭಾಷೆಯು ಎದುರಿಸುತ್ತಿರುವ ಸಮಸ್ಯೆಯೆಂದರೆ ಇಂಗ್ಲೀಷ್‌ನ ಪ್ರಭಾವ, ಸಾಕಷ್ಟು ಕನ್ನಡದ ಶಬ್ದಗಳು ಮೂಲೆಗುಂಪಾಗಿ ಆ ಸ್ಥಾನವನ್ನು ಈಗ ಇಂಗ್ಲಿಷ್ ಶಬ್ಧಗಳು ಅಲಂಕರಿಸಿಕೊಂಡಿವೆ. ಒಂದು ವರ್ಗದವರು ತಮ್ಮ ಭಾಷೆಯೊಂದಿಗೆ ಅರ್ಧಭಾಗದಷ್ಟು ಇಂಗ್ಲಿಷ್ ಭಾಷೆ ಸೇರಿಸಿ ಮಾತನಾಡುವುದು ಒಂದು ಶೈಲಿಯಾಗಿದೆ. ಇನ್ನೊಂದೆಡೆ ಕೆಲವು ವಿಷಯಕ್ಕೆ ಕನ್ನಡದ ಅರ್ಥ ಹುಡುಕಿ ಮಾತನಾಡುವುದು ಕಷ್ಟ. ಮಾತನಾಡಿದರೆ ಜನರಿಗೆ ಅರ್ಥವಾಗುವುದೂ ಇಲ್ಲ. ಉದಾ : ಬಸ್ ಎನ್ನುವುದನ್ನು ಕನ್ನಡದಲ್ಲಿ ಧೂಮ ಶಟಕ ಎಂದು ಹೇಳಿದರೆ ಯಾರಿಗೆ ತಾನೇ ಅರ್ಥವಾಗುವುದು. ಹೀಗೆ ಹಲವು, ಆದರೂ ಕೂಡ ಕನ್ನಡ ಭಾಷೆಯು ಸಾಹಿತ್ಯ ಲೋಕದಲ್ಲಿ ತನ್ನ ವಿಶಿಷ್ಟತೆಯನ್ನು ಬೆಳಗಿದೆ ಸಾಹಿತಿಗಳು ಆ ಭಾಷೆಯನ್ನು ಉಳಿಸಿ ಬೆಳೆಸಲು ಅವಿರತ ಶ್ರಮವಹಿಸುತ್ತಿದ್ದಾರೆ.

ಕನ್ನಡ ಭಾಷೆಯು ಇತಿಹಾಸ ಪೂರ್ವ ಕಾಲದಿಂದಲೂ ತನ್ನ ಮೇಲೆ ಪ್ರಭಾವ ಬೀರಿದ ಇತರ ಭಾಷೆಯ ದಾಳಿಯನ್ನು ಅತಿಕ್ರಮಿಸಿ ಇಂದು ಮೈದಳೆದು ನಿಂತಿದೆ.

● **ತೆಕ್ಕಡೆ ಬಿ. ಕುಮಾರ್**
ಮುತ್ತಾರ್ಮುಡಿಗ್ರಾಮ

ಕುಶಾಲನಗರದಲ್ಲಿ ಗೌಡ ಯುವಕ ಸಂಘದ ಸ್ಥಾಪನೆ

ದಿ|| 30-12-97 ರಂದು ಗೌಡ ಸಮಾಜ ಕುಶಾಲನಗರದಲ್ಲಿ ನೂತನವಾಗಿ ಗೌಡ ಯುವಕ ಸಂಘವನ್ನು ಸ್ಥಾಪಿಸಲಾಯಿತು. ಅಧ್ಯಕ್ಷತೆಯನ್ನು ಕುದುಕುಳಿ ಟಿ ಸುಬ್ಬಯ್ಯನವರು ಉದ್ಘಾಟಿಸಿ ಯುವಕರಿಗೆ ಶುಭ ಹಾರೈಸಿದರು. ಕೊಡಗನ ರಮೇಶ್ ಮತ್ತು ವಿ.ಪಿ. ಶಶಿಧರ್ ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು.

ನೂತನ ಕಾರ್ಯಕಾರಿ ಮಂಡಳಿ ರಚನೆ : ಅಧ್ಯಕ್ಷರಾಗಿ ಮಾವಜಿ. ಸಿ. ಗಣೇಶ್, ಉಪಾಧ್ಯಕ್ಷರಾಗಿ ಅಣ್ಣಮ್ಮನ ಜಯ ಕುಮಾರ್, ಪಂಜಿಪಳ್ಳ ಬಿ. ಯತೀಶ್, ಚಿಲ್ಲನ ಗಣಿಪ್ರಸಾದ್ ಕಾರ್ಯದರ್ಶಿಯಾಗಿ ಕುದುಕುಳಿ ಲೋಕೇಶ್, ಸಹಕಾರ್ಯದರ್ಶಿಯಾಗಿ ಪೊಕ್ಕುಳಂಡ್ರ ಆರ್. ಸುರೇಶ್, ಜೈನೀರ್ ಎನ್. ಪಳಂಗಪ್ಪ, ಖಜಾಂಚಿಯಾಗಿ ಕಾನೇಹಿತ್ಲು ಎನ್. ಪ್ರಸನ್ನ ಮತ್ತು ನಿರ್ದೇಶಕರಾಗಿ ಕುಯ್ಯಮುಡಿ ಸುರೇಶ್, ಕೊಕ್ಕಲೆರ ರವಿ, ಮೊಟ್ಟನ ಕರುಣ್, ಕುಕ್ಕನೂರು ಅರುಣ್, ನಡುಬೆಟ್ಟೀರ ಮೋಹನ್, ಅಂಬ್ರಾಟಿ ದಿನೇಶ್, ಕಟ್ರತನ ತಿಲಕ್ ಆಯ್ಕೆಯಾಗಿರುವುದಾಗಿ ತಿಳಿದು ಬಂದಿದೆ.

ಪ್ರಶಸ್ತಿಗಳು

1. ಜ್ಞಾನ ಪೀಠ ಪ್ರಶಸ್ತಿಗಳಿಸಿದ ಮೊದಲ ಮಹಿಳೆ- ಆಶಾಪೂರ್ಣ ದೇವಿ.
2. 'ಆಸ್ಕರ್' ಪ್ರಶಸ್ತಿ ಗಳಿಸಿದ ಮೊದಲ ಭಾರತೀಯ- ಬಾನು ಅಥೇಯ್
3. ಹರಗೋವಿಂದ ಖೊರಾನರಿಗೆ ನೊಬೆಲ್‌ಪ್ರಶಸ್ತಿ ಸಿಕ್ಕಿದ್ದು ವೈದ್ಯಕೀಯದಲ್ಲಿ ಅನುವಂಶೀಯತೆಯ ಶೋಧನೆಗೆ.
4. ಸೈನ್ಯದಲ್ಲಿ ಧೈರ್ಯ-ಸಾಹಸ ಪ್ರದರ್ಶಿಸಿದವರಿಗೆ ಸಿಗುವ ಬಿರುದು "ಪರಮ ವೀರಚಕ್ರ"
5. ಸಂಗೀತ ಕಲಾವಿಧರಿಗೆ "ತಾನ್ ಸೇನ್" ಪ್ರಶಸ್ತಿ ನೀಡಲಾಗುತ್ತದೆ.
6. ಅಂತರರಾಷ್ಟ್ರೀಯ ಅರಿವಿಗೆ 'ಮೆಗ್ಸಾಸ್ಸ್' ಪ್ರಶಸ್ತಿ ಪಡೆದವರು - ಮದರ್ ತೆರೆಸಾ
7. ಪಂಪ ಪ್ರಶಸ್ತಿ ಪಡೆದ ಮೊದಲ ಕೃತಿ - ರಾಷ್ಟ್ರ ಕವಿ ಕುವೆಂಪುರವರ ಶ್ರೀ ರಾಮಾಯಣ ದರ್ಶನಂ.
8. ಭಾರತ-ಪಾಕಿಸ್ತಾನಗಳ ಸ್ನೇಹ ವರ್ಧನೆಗೆ ಶ್ರೀ ಮೊರಾರ್ಜಿ ದೇಸಾಯಿಯವರಿಗೆ ಸಿಕ್ಕಿದ ಪ್ರಶಸ್ತಿ - ನಿಶಾನ್-ಎ-ಪಾಕಿಸ್ತಾನ್.
9. ವಿಶ್ವ ಚಿತ್ರೋತ್ಸವದಲ್ಲಿ ಮೊದಲ ಬಾರಿಗೆ ಪ್ರಶಸ್ತಿಗಳಿಸಿದ ಭಾರತೀಯ ಚಿತ್ರ - ಮರಾಠಿ ಭಾಷೆಯ ಸಂತ ತುಕಾರಾಮ್
10. ಇತ್ತೀಚೆಗೆ ಅರುಂಧತಿ ರಾಯ್‌ಯವರಿಗೆ ಸಿಕ್ಕಿದ ಪ್ರಶಸ್ತಿ "ಬೂಕರ್". ಪುಸ್ತಕದ ಹೆಸರು The God of small things.

ಸಂಗ್ರಹ : **ನೀತು ಮಾಚಯ್ಯ,**
ಬೆಂಗಳೂರು.

ಪ್ರಾಣಿ ಬಲಿ ಅಗತ್ಯವೇ ?

ದೈವ, ಭೂತ, ಪಿಶಾಚಿ ಇತ್ಯಾದಿಗಳನ್ನು ಸಂತೋಷ ಪಡಿಸಲು ಪ್ರಾಣಿ, ಪಕ್ಷಿಗಳ ಬಲಿ ನೀಡುವ ಪದ್ಧತಿ ವಿಶ್ವದ ಹಲವಾರು ದೇಶಗಳಲ್ಲಿ ನೆಲೆಸಿರುವ ಹಲವಾರು ಜನಾಂಗಗಳಲ್ಲಿ 'ಪ್ರಾಣಿ ಬಲಿ' ಪದ್ಧತಿ ಹೆಚ್ಚು ಪ್ರಚಲಿತದಲ್ಲಿದೆ ಎಂಬುದನ್ನು ನಾವು ಗಮನಿಸಬಹುದು.

ಇತರ ಕೆಲವು ಜನಾಂಗಗಳಂತೆ, ನಮ್ಮ ಕೊಡಗು ಗೌಡ ಜನಾಂಗದಲ್ಲೂ ಈ ಪದ್ಧತಿ ಪ್ರಚಲಿತದಲ್ಲಿದೆ. ಆದುದರಿಂದ ಪ್ರಾಣಿಬಲಿ ಪದ್ಧತಿ ಅಗತ್ಯವೇ ಎಂಬ ಬಗ್ಗೆ ನಾವೆಲ್ಲರೂ ಇಂದು ಅಗತ್ಯವಾಗಿ ಚಿಂತಿಸಬೇಕು.

○ **ಬೈತಡ್ಕ ಕೆ. ಶ್ರೀಧರ್** ಪಾಲೂರು

ಪ್ರಾಣಿ, ಪಕ್ಷಿಗಳನ್ನು ಬಲಿ ಕೊಡುವುದರ ಮುಖ್ಯ ಉದ್ದೇಶ ದೈವ, ಭೂತ, ಪ್ರೇತ, ಪಿಶಾಚಿಗಳನ್ನು ಸಂತೋಷಪಡಿಸುವುದೇ ಆಗಿದೆ. ದೈವ, ಭೂತಗಳನ್ನು ಸಂತೋಷಪಡಿಸುವುದಾದರೂ ಏತಕ್ಕೆ ? ಕಾರಣ ಎಲ್ಲರಿಗೂ ತಿಳಿದದ್ದೇ. ಪ್ರಾಣ, ಆಸ್ತಿಪಾಸ್ತಿ, ದನಕರು, ಕೋಳಿ, ಹಂದಿ ಇತ್ಯಾದಿಗಳ ರಕ್ಷಣೆಗೆಂದು ದೈವ, ಭೂತಗಳನ್ನು ಪೂಜಿಸಿ ಸಂತೋಷಪಡಿಸಲಾಗುತ್ತದೆ. ನಮ್ಮ ದನಕರು, ಕೋಳಿ, ಹಂದಿಗಳ ರಕ್ಷಣೆ ಮಾಡಿ ಅವುಗಳಿಗೆ ಯಾವುದೇ ಅಪಾಯವುಂಟಾಗದಂತೆ ನೋಡಿಕೊಳ್ಳುವ ದೈವ, ಭೂತಗಳಿಗೆ ಕೋಳಿ, ಹಂದಿಗಳನ್ನೇ ಬಲಿಯಾಗಿ ನೀಡುವುದು ಬಹಳ ವಿಚಿತ್ರವೆನಿಸುತ್ತದೆ ಇದು ರಕ್ಷಣೆ ಮಾಡಬೇಕಾದವನಿಗೆ ರಕ್ಷಣೆ ಮಾಡಲ್ಪಡಬೇಕಾದುದನ್ನೇ ಬಲಿ ಕೊಟ್ಟಂತಲ್ಲವೇ ?

ವರ್ಷಕ್ಕೊಂದು ಕೋಳಿಯನ್ನೋ, ಕುರಿಯನ್ನೋ ಅಥವಾ ಹಂದಿಯನ್ನೋ ಬಲಿ ನೀಡಿ, ಇಡೀವರ್ಷ ನಮ್ಮನ್ನು ಮತ್ತು ನಮಗೆ ಸೇರಿದ್ದೆಲ್ಲವನ್ನೂ ಕಾಪಾಡು ಎಂದು ದೈವ, ಭೂತಗಳನ್ನು ಪ್ರಾರ್ಥಿಸುವುದನ್ನು ನೋಡಿದಾಗ ಬಹಳ ತಮಾಷೆಯೆನಿಸುತ್ತದೆ. ವರ್ಷಕ್ಕೊಂದು ಪ್ರಾಣಿ ಅಥವಾ ಪಕ್ಷಿಯನ್ನು ಬಲಿ ನೀಡಿದರೆ ಸಾಕೇ ? ವರ್ಷದ ಉಳಿದ ದಿನಗಳಲ್ಲಿ ಆ ದೈವ, ಭೂತಗಳು ಉಪವಾಸ ಬೀಳುವುದಿಲ್ಲವೇ ? ಹಾಗೂ ಅಸಂತೋಷಗೊಳ್ಳುವುದಿಲ್ಲವೇ ? ಸರಿಯಾಗಿ ನೋಡಿದರೆ ಪ್ರತಿದಿನವೂ ಒಂದು ಕೋಳಿ ಅಥವಾ ಹಂದಿಯನ್ನು ಬಲಿಯಾಗಿ ನೀಡಬೇಕು. [ದೇವರನ್ನು ನಾವು ದಿನವೂ ಪೂಜಿಸಿ ಪ್ರಾರ್ಥನೆ ಮಾಡುವ ರೀತಿ] ಹೀಗಾದರೆ ವರ್ಷವಿಡೀ ದೈವ, ಭೂತಗಳು ಸಂತೋಷದಿಂದಿದ್ದು ನಮ್ಮನ್ನೆಲ್ಲಾ ಕಾಪಾಡಲು ಸಾಧ್ಯ.

ದೈವ, ಭೂತಗಳಿಗೆ ನಿಜವಾಗಿ ಬೇಕಾಗಿರುವುದು ನಮ್ಮ ಭಕ್ತಿ, ಪ್ರೀತಿ, ವಿಶ್ವಾಸ ಹೊರತು ಖಂಡಿತವಾಗಿ ರಕ್ತವಲ್ಲ. ದೈವ, ಭೂತಗಳನ್ನು ಸಂತೃಪ್ತಿ ಪಡಿಸಲು ತನ್ನ ದೇಹದ ನಾಲ್ಕು ಹನಿ ರಕ್ತವನ್ನು ನೀಡಲು ಮನುಷ್ಯ ಸಿದ್ಧನಿಲ್ಲ. ಬದಲಾಗಿ, ನಿರ್ದಾಕ್ಷಿಣ್ಯವಾಗಿ ಕೋಳಿ, ಹಂದಿಗಳ ಕತ್ತು ಕುಯ್ಯುತ್ತಾನೆ ! ಇದು ಮನುಷ್ಯನ ಸ್ವಾರ್ಥವಲ್ಲವೇ ? ತನ್ನ ಸುಖಕ್ಕಾಗಿ ಕೋಳಿ, ಹಂದಿಗಳು ಪ್ರಾಣ ನೀಡಬೇಕೆಂದು ಬಯಸುವ ಮಾನವ ನಿಜಕ್ಕೂ ದುಷ್ಟ. ಏನೂ ತಿಳಿಯದ, ತಪ್ಪು ಮಾಡದ, ಕೋಳಿ ಹಂದಿಗಳು ಮನುಷ್ಯನ ಸ್ವಾರ್ಥಕ್ಕಾಗಿ ತಮ್ಮ ಜೀವ ನೀಡಬೇಕಾಗುತ್ತದೆ.

ಕೋಳಿ, ಹಂದಿಗಳನ್ನು ಬಲಿನೀಡಿದ ನಂತರ ಅವುಗಳ ದೇಹವನ್ನು ದೈವ, ಭೂತಗಳಿಗೆ ಆಹಾರವಾಗಿ ಬಲಿ ನೀಡಿದ ಸ್ಥಳದಲ್ಲಿ ಬಿಟ್ಟುಬರುವ ಪದ್ಧತಿಯನ್ನು ಮನುಷ್ಯ ಬೆಳೆಸಿಕೊಂಡಂತೆ ಕಾಣುವುದಿಲ್ಲ. ಬದಲಾಗಿ ಬಲಿನೀಡಿದ ಪ್ರಾಣಿ, ಪಕ್ಷಿಗಳ ದೇಹಗಳನ್ನು ಮರಳಿ ಮನೆಗೆ ತಂದು ರುಚಿಕರವಾದ ಅಡುಗೆ ಮಾಡುತ್ತಾನೆ! ಕೆಲವು ತೊಟ್ಟು ರಕ್ತ ದೈವ, ಭೂತಗಳಿಗೆ ಪೌಷ್ಟಿಕವಾದ ಮಾಂಸ ತನಗೆ ! ಭಲೆ ! ಮನುಷ್ಯ ಎಷ್ಟು ಬುದ್ಧಿವಂತ !

ದೈವ, ಭೂತಗಳನ್ನು ಪೂಜಿಸುವುದು ಆಯಾಯ ವ್ಯಕ್ತಿಗೆ ಸಂಬಂಧಪಟ್ಟವಿಷಯ. ಅದನ್ನು ನಾನು ಪ್ರಶ್ನಿಸುವುದಿಲ್ಲ. ಆದರೆ ಪ್ರಾಣಿ ಬಲಿಯೆಂಬ ದುಷ್ಟ ಮತ್ತು ಅನಾಗರಿಕ ಪದ್ಧತಿಯನ್ನು ಮಾತ್ರ ವಿರೋಧಿಸುತ್ತೇನೆ.

ಇನ್ನೊಂದು ವಿಷಯವನ್ನು ಇಲ್ಲಿಪ್ರಸ್ತಾಪಿಸುವುದು ಹೆಚ್ಚು ಸಮಂಜಸ. ಪ್ರಾಣಿ ಪಕ್ಷಿಗಳ ಬಲಿ ನೀಡಿ ದೈವ, ಭೂತಗಳನ್ನು ಸಂತೋಷಪಡಿಸಿದ ನಂತರವೂ ಹಲವು ಬಾರಿ ಪ್ರಾಣ, ಆಸ್ತಿಪಾಸ್ತಿಯ ನಷ್ಟ ಉಂಟಾಗುತ್ತದೆಯಲ್ಲ ! ಇದಕ್ಕೇನು ಹೇಳೋಣ ? ದೈವ, ಭೂತಗಳಿಗೆ ಪ್ರಾಣಿ ಬಲಿ ನೀಡದ ಕೆಲವು ಜನಾಂಗಗಳಿವೆ. ಜನರೂ ಇದ್ದಾರೆ.ಅಂತವರ ಆಸ್ತಿಪಾಸ್ತಿಗೆ ಯಾವುದೇ ನಷ್ಟವಾಗಲಿ, ಧಕ್ಕೆಯಾಗಲಿ, ಆಗದಿರುವುದನ್ನು ಬಹಳಷ್ಟು ಕಡೆ ನಾವು ಕಾಣಬಹುದು. ಪ್ರಾಣಿಬಲಿ ನೀಡದ ಪಾಶ್ಚಾತ್ಯರ ಹೊಲ, ತೋಟ, ಗದ್ದೆಗಳು ನಮ್ಮ ಹೊಲ, ಗದ್ದೆ, ತೋಟಗಳಿಗಿಂತಲೂ ಹೆಚ್ಚು ಫಲವತ್ತಾಗಿರುವುದನ್ನೂ ಮತ್ತು ಹೆಚ್ಚು ಆದಾಯ ತರುವಂತಹದಾಗಿರುವುದನ್ನೂ ನಾವಿಲ್ಲಿ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ಬಲಿ ಕೊಡಬೇಕಾಗಿರುವ ಪ್ರದೇಶವನ್ನು ದೇವಸ್ಥಾನದಿಂದ ತಂದಿರುವ ಪವಿತ್ರ ನೀರು [ತೀರ್ಥ] ದಿಂದ ಶುದ್ಧಿಗೊಳಿಸುವ ಕ್ರಮವನ್ನು ನಾನು ಹಲವು ಕಡೆ ನೋಡಿದ್ದೇನೆ. ಪವಿತ್ರ ತೀರ್ಥವನ್ನು ಸಿಂಪಡಿಸಿ ಶುದ್ಧಗೊಳಿಸಿದ ಪ್ರದೇಶದ ಮೇಲೆ ರಕ್ತತರ್ಪಣನೀಡುವುದು ಬಹಳ ವಿಚಿತ್ರವಾಗಿದೆ ಮಾತ್ರವಲ್ಲ ಪವಿತ್ರ ತೀರ್ಥಕ್ಕೆ ಅಪಚಾರವೆಸಗಿದಂತೆ ಕೂಡಾ ಆಗುತ್ತದೆ.

ಎಲ್ಲಾ ಪ್ರಾಣಿ, ಪಕ್ಷಿಗಳಲ್ಲೂ ದೇವರಿದ್ದಾನೆನ್ನುವುದನ್ನು ಬಹುಶಃ ಎಲ್ಲರೂ ಒಪ್ಪುತ್ತಾರೆ. ದೇವರು ವಾಸವಾಗಿರುವಂತಹ ಒಂದು ದೇಹವನ್ನು ದೈನಕ್ಕಾಗಲಿ, ಭೂತಕ್ಕಾಗಲಿ ಬಲಿಯಾಗಿ ನೀಡುವುದು ಖಂಡಿತವಾಗಿಯೂ ಅಜ್ಞಾನದಿಂದ ಕೂಡಿದ ಕ್ರಿಯೆ. "ಪ್ರಾಣಿಗಳಿಗೆ ಪೀಡೆಯನ್ನು ಅಥವಾ ತೊಂದರೆಯನ್ನು ಉಂಟುಮಾಡುವಂತಹ ತಪಸ್ಸನ್ನು ಯಾರೂ ಮಾಡುತ್ತಾರೋ ಅಂತಹ ಅವಿವೇಕಿಗಳು ಅಸುರ ಸ್ವಭಾವದವರು" ಎನ್ನುವ ಮಾತು 'ಭಗವದ್ಗೀತೆ' ಯಲ್ಲಿ ಹೇಳಲ್ಪಟ್ಟಿದೆಯೆನ್ನುವುದನ್ನು ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಸೂಕ್ತ.

ಬಲಿಕೊಡಬೇಕಾಗಿರುವ ಪ್ರಾಣಿ, ಪಕ್ಷಿಗಳನ್ನು ಕೊಲ್ಲುವ ರೀತಿಯೂ ಬಹಳ ಭಯಾನಕವಾಗಿದೆ. ಮಾತ್ರವಲ್ಲ ಮನಸ್ಸಿಗೆ ನೋವುಂಟುಮಾಡುವಂತಹದೂ ಆಗಿದೆ. ಬಲಿಪಶುವಿನ ಕೈಕಾಲುಗಳನ್ನು ಬಿಗಿಯಾಗಿ ಕಟ್ಟಿ ಕುತ್ತಿಗೆಯನ್ನು ಕೊಯ್ಯುವುದು ನಿಜಕ್ಕೂ ಭಯಾನಕ ದೃಶ್ಯ. ಒಂದೇ ಬಾರಿಗೆ ಗುಂಡಿಕ್ಕಿ ಕೊಲ್ಲುವುದಾದರೂ ಅದಕ್ಕಿಂತ ಮೇಲು. ಹಲವು ಪ್ರಾಣಿ, ಅಥವಾ ಪಕ್ಷಿಗಳನ್ನು ಬಲಿಕೊಡಬೇಕಾಗಿರುವ ಸಂದರ್ಭದಲ್ಲಿ ಒಂದು ಪ್ರಾಣಿ ಅಥವಾ ಪಕ್ಷಿಯು ಎದುರೇ ಇನ್ನೊಂದು ಪ್ರಾಣಿ ಅಥವಾ ಪಕ್ಷಿಯನ್ನು ಕೊಲ್ಲುವ ಕ್ರಿಯೆ ಬಹಳ ಅಮಾನುಷವಾದುದು.

ಮೇಲಿನ ವಿಷಯಗಳನ್ನು ಗಮನಿಸಿದಾಗ ಪ್ರಾಣಿಬಲಿ ಒಂದು ಅಮಾನುಷ ಮತ್ತು ಅನಾಗರಿಕ ಪದ್ಧತಿಯೆಂಬುದು ಸ್ಪಷ್ಟವಾಗುತ್ತದೆ. ಇಂದು ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರಿಯುತ್ತಿರುವ ಕೊಡಗು ಗೌಡ ಜನಾಂಗ ತನ್ನಲ್ಲಿ ಪ್ರಚಲಿತಲ್ಲಿರುವ 'ಪ್ರಾಣಿ ಬಲಿ' ಪದ್ಧತಿಯ ಕುರಿತು ಗಂಭೀರವಾಗಿ ಚಿಂತನೆ ಮಾಡಬೇಕಿದೆ.

ಹೆಚ್ಚಿನ ತರಭೇತಿಗಾಗಿ ರಷ್ಯಕ್ಕೆ ತೆರಳಿರುವ ಲೆಫ್ಟಿನೆಂಟ್ ಕಮಾಂಡರ್ ವಿನೋದ್

ಲೆಫ್ಟಿನೆಂಟ್ ಕಮಾಂಡರ್ ನಂಗಾರು ಅಪ್ಪಾಜಿ ವಿನೋದ್‌ರವರು ಬೆಂಗಳೂರಿನ ಸರ್. ಎಂ. ವಿಶ್ವೇಶ್ವರಯ್ಯ ಕಾಲೇಜಿನಲ್ಲಿ ಇಂಜಿನಿಯರಿಂಗ್ ಮುಗಿಸಿ 1990ರಲ್ಲಿ ಕಮೀಷನರ್ ಆಫೀಸರ್



ವಿನೋದ್ ದಂಪತಿಗಳು

ಆಗಿ ಭಾರತೀಯ ಜಲಸೇನೆಗೆ ಸೇರ್ಪಡೆಯಾದರು. ವಿನೋದ್‌ರವರು ಭಾಗಮಂಡಲನಾಡಿನ ನಿವೃತ ಮಾಸ್ಟರ್ ವಾರಾಂಟ್ ಆಫೀಸರ್ ನಂಗಾರು ಅಪ್ಪಾಜಿಯವರ ಮಗನಾಗಿದ್ದಾರೆ. ವಿನೋದ್‌ರವರ ಅಜ್ಜನೇ ಅಪಾರವಾಗಿ ಜನಸೇವೆಗೈದ ದಿವಂಗತ ನಂಗಾರು ಮುತ್ತಣ್ಣನವರು.

ಶ್ರೀಯುತರು ರಷ್ಯದ ಉತ್ತರ ಭಾಗದಲ್ಲಿರುವ ಸೆವಿರೋಡೊವಿನ್ಸರ್ ಎಂಬ ಪರಿಣತ ಸಬ್‌ಮೇರಿನ್ ತಾಣದಲ್ಲಿ 2 ವರ್ಷದ ತರಬೇತಿಗಾಗಿ ತೆರಳಿದ್ದಾರೆ. ಭಾರತದಿಂದ ಈ ಸ್ಥಳಕ್ಕೆ ತೆರಳಲು ಸುಮಾರು 45 ದಿವಸಗಳ ದೀರ್ಘ ಪಯಣ. ಈ ಪ್ರಯಾಣದ ವಿಶೇಷತೆ ಎಂದರೆ ಹೊರ ಪ್ರಪಂಚದ ಸೋಂಕಿಲ್ಲದೆ ನೀರಿನೊಳಗೆ ಸಬ್‌ಮೇರಿನ್‌ನಲ್ಲಿ ಪ್ರಯಾಣಿಸಿದ್ದು ನಿಜವಾಗಲೂ ಆಶ್ಚರ್ಯದ ಸಂಗತಿಯೇ ಸರಿ.

ಶ್ರೀ ವಿನೋದ್‌ರವರು 9-6-1995ರಲ್ಲಿ ಕಾಳೆಯಂಡ್ರ ಮಾಚಯ್ಯನವರ ಪುತ್ರಿ ಡಾ|| ಸುಮಾರಾಣಿಯವರನ್ನು ವಿವಾಹವಾಗಿದ್ದಾರೆ. ತನ್ನ ಪತಿಯಿದ್ದಲ್ಲಿಗೆ ಹಂಬಲಿಸಿ ತೆರಳಿದ ಈ ನವ ದಂಪತಿಗಳಿಗೆ ಜೀವನದಲ್ಲಿ ಉತ್ತಮ ಭವಿಷ್ಯವನ್ನು ನಿರೂಪಿಸಿ ಗೌಡಭಾಂದವರಿಗೆ ಮಾದರಿಯಾಗಿ ಬಾಳಲೆಂದು ಕೊಡಗು ಸಂಗಾತಿ ಹೃದಯ ತುಂಬಿ ಹಾರೈಸುತ್ತದೆ.

ನಗೆ ಹನಿ

ಕಂಡಕ್ಟರ್ ಟಿಕೆಟ್ ಇಶ್ಯೂ ಮಾಡುತ್ತಿದ್ದ. ಅದೇ ವೇಳೆಗೆ ಕುರುಡ ಬಿಕ್ಷುಕನೊಬ್ಬ ಹಾಡುತ್ತಾ ಬಂದ. ಕಂಡಕ್ಟರ್‌ಗೆ "ಇಳಿಯಯ್ಯ ಮೊದಲು, ನಾವಿಬ್ರೂ ಒಟ್ಟಿಗೆ ಕೈ ಚಾಚಿದರೆ ಪ್ಯಾಸೆಂಜರ್ಸ್‌ಗೆ ಕನ್‌ಫ್ಯೂಸ್ ಆಗುತ್ತೆ" ಎಂದು ಅವನನ್ನು ಇಳಿಸಿದ.

—ಕುದುಕುಳಿ ಲೇಖ ರವಿಕುಮಾರ್.

ವಿಜೃಂಭಿಸಿದ ಬೃಹತ್ ಗೌಡ ಸಾಂಸ್ಕೃತಿಕ ಮೇಳ

ಮೊದಲ ಪ್ರಯೋಗದಲ್ಲೇ ಯಶಕಂಡ "ಸಾಂಸ್ಕೃತಿಕ ಅಕಾಡೆಮಿ"

ಗೌಡ ಸಂಸ್ಕೃತಿ, ಕಲೆ ಸಾಹಿತ್ಯಗಳನ್ನು ಜಗದೆಲ್ಲೆಡೆ ಪಸರಿಸುವ ಪಣತೊಟ್ಟ, ಇತ್ತೀಚೆಗೆ ಜನ್ಮತಾಳಿದ 'ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ' ಪ್ರಪ್ರಥಮವಾಗಿ ಮಡಿಕೇರಿಯಲ್ಲಿ ಆಯೋಜಿಸಿದ್ದ 'ಸಾಂಸ್ಕೃತಿಕ ಮೇಳ' ವನ್ನು ಕಿಕ್ಕಿರಿದು ನೆರೆದಿದ್ದ ಜನಸಾಗರದ ಕರತಾಡನಗಳ ನಡುವೆ, ವಯೋವೃದ್ಧರೂ, ಸ್ವಾತಂತ್ರ್ಯ ಸೇನಾನಿಯೂ, ದಕ್ಷಿಣ ಭಾರತದ ರಾಷ್ಟ್ರೀಯ ಹಿಂದಿ ಪ್ರಚಾರಕರೂ ಆದ ಶ್ರೀ ಬೈತಡ್ಕ ದೇವಯ್ಯನವರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ನಾವಿಂದು ಸಂಸ್ಕೃತಿಯ ಬೆಳವಣಿಗೆಯಲ್ಲಿ ನಿಧಾನಗತಿಯನ್ನನುಸರಿಸಿದ್ದೇವೆ. ನಮ್ಮಲ್ಲಿ ಶೇ. 60ರಷ್ಟು ಮಂದಿ ಬಡವರೇ ಇರುವುದರಿಂದ ಶ್ರೀಮಂತರು ಸಹಾಯ ಮಾಡಬೇಕು. ಸಮಾಜದ ಬಗ್ಗೆ ಚಿಂತನೆ ನಡೆಸಿ, ಸ್ವಾತಂತ್ರ್ಯಕ್ಕಾಗಿ ಬಲಿದಾನಗೈದವರನ್ನು ನೆನಸಿಕೊಳ್ಳಬೇಕು. ದುಶ್ಚಟಗಳನ್ನು ದೂರಮಾಡಿ, ಆರ್ಥಿಕವಾಗಿ ಮುನ್ನಡೆಯಬೇಕೆಂದು ಕರೆನೀಡಿದರು. **ವೇದಿಕೆಯ** ಮೇಲೆ ಶ್ರೀಮತಿ ಬೈತಡ್ಕ ದೇವಯ್ಯ, ದಂಬೆಕೋಡಿ ಚಿಣ್ಣಪ್ಪ, ತೋಟಂಬೈಲು ನಾಣಯ್ಯ, ಕುಯ್ಯಮುಡಿ ಪೂರ್ಣಯ್ಯ, ಯಾಲದಾಳು ಕೇಶವಾನಂದ, ಚೀಯಂಡಿರ ರಾಧಯಾದವನವರು ಉಪಸ್ಥಿತರಿದ್ದರು. ಕಾರ್ಯಕ್ರಮವು ಮಣಿಂಡ್ರ ರೇಖಾ ಉಲ್ಲಾಸ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡರೆ, ಅಕಾಡೆಮಿ ಅಧ್ಯಕ್ಷ ತುಂತಜ್ಜಿರ ಗಣೇಶ ಸ್ವಾಗತಿಸಿದರು, ಕಾರ್ಯದರ್ಶಿ ಕೋಡಿ ಚಂದ್ರಶೇಖರ್ ವಂದನಾರ್ಪಣೆ ಸಲ್ಲಿಸಿದರು. ಉಪಾಧ್ಯಕ್ಷ ಗುಡ್ಡೆರ ರಮೇಶ್ ಕಾರ್ಯಕ್ರಮ ನಿರೂಪಿಸಿದರು.

ವರ್ಣಮಯ ಎಲ್ಲೆಲ್ಲೂ ಗೌಡಮಯ :

ಜನವರಿ 4ರಂದು ಗೌಡಜನರ ಪಾಲಿಗೆ ಸೂರ್ಯ ತೇಜೋಮಯನಾಗಿ ಉದಯಿಸಿದ್ದನು. ಕೊಡಗು ಉತ್ಸವದಿಂದ ಹಿಡಿದು, ನಾಡಿನಲ್ಲಿ ನಡೆದ ಹಲವು ಕಾರ್ಯಕ್ರಮಗಳಲ್ಲಿ ದಿವ್ಯನಿರ್ಲಕ್ಷ್ಯಕ್ಕೊಳಪಟ್ಟ ಗೌಡ ಜನಾಂಗ ಚಳಿಗಾಲದಲ್ಲೇ ಚಳಿಬಿಟ್ಟು ಮೈಕೊಡವಿ, ತನ್ನ ಇರುವಿಕೆಯನ್ನು ಜಗಜ್ಜಾಹಿರುಗೊಳಿಸಲು ಹೊರಟಿತು. ಕೊಡಗು ಗೌಡರ ಇತಿಹಾಸದಲ್ಲೇ ಪ್ರಪ್ರಥಮವಾಗಿ 'ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ' ವತಿಯಿಂದ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮ ನಿರೀಕ್ಷೆಗೂ ಮೀರಿ ಯಶಸ್ಸು ಸಾಧಿಸಿತು.

ಅಂದು ಮಡಿಕೇರಿಯ ಗೌಡಸಮಾಜವು ಎಂದಿಗಿಂತ ಹೆಚ್ಚಾಗಿಯೇ ಶೃಂಗರಿಸಿಕೊಂಡು ತನ್ನ ಸಮಾಜ ಬಂಧುಗಳನ್ನು ಕೈ ಬೀಸಿ ಸ್ವಾಗತಿಸುತಿತ್ತು. ಬೆಳಿಗ್ಗೆಯಿಂದಲೇ ಸಮಾಜದಲ್ಲಿ ಜಮಾಯಿಸತೊಡಗಿದ ಜನ, ಮಧ್ಯಾಹ್ನದ ಹೊತ್ತಿಗೆ ಸಮಾಜ ಜನರಿಂದಲೇ ಮೈದುಂಬಿ ಹೋದಂತೆ ಭಾಸವಾಗುತಿತ್ತು. ಕೈಗೂಸುಗಳಿಂದ ಹಿಡಿದು, ಮುದುಕ, ಮುದುಕಿಯರವರೆಗೆ ಅಭಿಮಾನದ ಮಹಾಪೂರ ಸಮಾರಂಭಕ್ಕೆ ಹರಿದು ಬಂದಿತ್ತು. ಸಮಾರಂಭದುದ್ದಕ್ಕೂ ಜನ ಭಾವುಕರಾಗಿ ಕಾರ್ಯಕ್ರಮದಲ್ಲಿ ತಲ್ಲೀನರಾಗಿದ್ದು, ಅನಗತ್ಯವಾಗಿ ಕಿಂಚಿತ್ತೂ ಮೌನಗೆಡಿಸದೆ ಪ್ರಬುದ್ಧತೆಯ ತೋರಿ ಮಾದರಿ ಜನಾಂಗವೆನಿಸಿದರು. ಮಹಿಳೆಯರಲ್ಲಿ ಸಾಕಷ್ಟು ಜನ ಕೊಡಗು ಸಂಪ್ರದಾಯದ ಉಡುಗೆ ಧರಿಸಿದ್ದರು. ವೇದಿಕೆಯ ಮೇಲೂ ಕೆಳಗೂ ಗೌಡಕನ್ನಡವು ಪ್ರಬುದ್ಧ ಶ್ರೇಷ್ಠವಾಗಿ ಮೆರೆಯಿತು.

ಉತ್ಸಾಹ ಕೆರಳಿಸಿದ ವೇದಿಕೆ :

ವಿದ್ಯುದಾಲಂಕೃತಗೊಂಡು ಝಗಝಗಿಸುತ್ತಿದ್ದ ವೇದಿಕೆ ಮಿರಿಮಿರಿ ಮಿಂಚುತ್ತಿದ್ದ ಸಭಾಂಗಣ ಒಂದು ಕಡೆ ಆಕರ್ಷಣೀಯವಾಗಿದ್ದರೆ, ಪುಟಾಣಿಗಳಿಂದ ಹಿಡಿದು ವಯಸ್ಕರವರೆಗಿನ ಕಲಾವಂತರನ್ನು ಕಂಡು ಜನ ಮಂತ್ರಮುಗ್ಧರಾದರು. ಮಡಿಕೇರಿಯ ಹೆಸರಾಂತ ತಂಡದಿಂದ 'ವೈಕುಂಠ ರಂಗನಾಥ' ನೃತ್ಯರೂಪಕದೊಡನೆ ಕಾರ್ಯಕ್ರಮ ಪ್ರಾರಂಭಗೊಂಡಿತು. ಇಡೀ ಸಮಾರಂಭದಲ್ಲಿ ಮರಗೋಡು ಐಕೊಳ ಮತ್ತು ಭಾಗಮಂಡಲಗಳ ಕಲಾತಂಡಗಳು ಪ್ರಮುಖ ಪಾತ್ರವಹಿಸಿದ್ದವು. ಮರಗೋಡು ಐಕೊಳ ತಂಡವು ಕೋಲಾಟ, ಫೋಟೋ ಸೋನಾ, ಮದುವೆ ರೂಪಕ ಮೊದಲಾದ ಕಾರ್ಯಕ್ರಮಗಳಿಂದ ಜನರನ್ನು ಆಕರ್ಷಿಸಿದರೆ, ಭಾಗಮಂಡಲ ತಂಡದ ಅಜ್ಜಿಯ ಸಡಗರ ನಾಟಕ, ಕೋಲಾಟ ಗಮನ ಸೆಳೆದವು. ಮುತ್ತಾರ್ಮುಡಿ ತೆಕ್ಕಡೆ ಕುಮಾರ್‌ರವರ ದೈವದ ಕೋಲ ರೂಪಕ ಜನಮನ ಸೂರೆಗೊಂಡಿತು. ಗಾಳಿಬೀಡು ತಂಡವೂ ತನ್ನ ಸಾಹಸ ಮೆರೆದರೆ, ಬೆಂಗಳೂರಿನ ತಂಡದ ಸಾಂಪ್ರದಾಯಿಕ ಉಡುಪಿನಿಂದೊಡಗೂಡಿದ ನೃತ್ಯ ಮೈನವಿರೇಳಿಸುವಂತಿತ್ತು. "ಕೊಡಗು ಸಂಗಾತಿ" ಬಳಗದ ಕುಮಾರಿ ಗೀತಾ ಮೊಂಟಡ್ಕನವರಿಂದ ಮಿಮಿಕ್ರಿ ಜನರ ಮನವನ್ನು ಸೂರೆಗೊಳ್ಳುವಲ್ಲಿ ಸಫಲವಾಯಿತು. ಜೊತೆಗೆ ಶೋಭಾನೆಗಳು, ಅರೆಭಾಷೆಯ ಹಾಡುಗಳು, ಜಾನಪದ ನೃತ್ಯಗಳು, ಬ್ರೇಕ್ ಮತ್ತು ಡಿಸ್ಕೋಡ್ಯಾನ್ಸ್‌ಗಳು ರೋಮಾಂಚನದ ಮೇಲೋಗರವನ್ನು ಒದಗಿಸಿದ್ದವು. ಒಟ್ಟಿನಲ್ಲಿ ಸಂಪೂರ್ಣ ಕಾರ್ಯಕ್ರಮವು ಜನರ ಮನದಲ್ಲಿ ತನ್ನ ಪಡಿಯಚ್ಚನ್ನು ಒತ್ತಿ ಕಾರ್ಯಕ್ರಮ ಮುಗಿಯುವವರೆಗೂ ಅಲ್ಲಿಂದ ಕದಲದಂತೆ ಕಟ್ಟಿಹಾಕಿತು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಾಗ ಹರ್ಷಿತರಾದ 'ಸಾಂಸ್ಕೃತಿಕ ಅಕಾಡೆಮಿ'ಯ ಸದಸ್ಯರು ಜಯಘೋಷದೊಡನೆ ಕೈಯೆತ್ತಿ ವಂದನೆ ಸೂಚಿಸಿದರು.

ಸಭೆಯ ನಡುವೆ ಜನಮನ :-

ಕಾರ್ಯಕ್ರಮ ನಡೆಯುತ್ತಿದ್ದಾಗ ಒಂದು ಕ್ಷಣ ಜನಸಾಗರ ಸ್ಥಬ್ಧಗೊಂಡರೆ, ಮತ್ತೊಂದು ಕ್ಷಣ ಕರತಾಡನಗಳ ಮೂಲಕ ನಳನಳಿಸುತ್ತಿತ್ತು. ಆಗ ಮಧ್ಯೆ ಮಧ್ಯೆ ಜನರಾಡುತ್ತಿದ್ದ ಮಾತುಗಳು 'ಸಂಗಾತಿ' ಕಿವಿಗೆ ಬಿದ್ದಿತು. ನಮ್ಮ ಜನ ಅಕಾಡೆಮಿಯ ಕರೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಕೊಯಿಲು ಕೆಲಸದ ನಡುವೆಯು ಇಷ್ಟೊಂದು ಜನ ನೆರೆದಿರುವುದನ್ನು ನೋಡಿದರೆ ಬೇರೆ ಸಂದರ್ಭದಲ್ಲಾದರೆ ಜನ ನಿಯಂತ್ರಣವೇ ಕಷ್ಟವಾಗಿರುತ್ತಿತ್ತು. ಅಕಾಡೆಮಿಯ ಪದಾಧಿಕಾರಿಗಳು ಕೇವಲ ರುಮಾಲು ಮಾತ್ರ ತೊಟ್ಟಿದ್ದರು. ಸಂಪೂರ್ಣ ಸಂಪ್ರದಾಯ ಉಡುಪು ತೊಡಬೇಕಾಗಿತ್ತು. ಮೇಲೆ ಹೇಳಿದ ಕೆಲವು ಊರುಗಳನ್ನುಳಿದು, ಗೌಡ ಜನಾಂಗವೇ ಹೆಚ್ಚಾಗಿದ್ದ ಹಲವು ಊರುಗಳಿಂದ ಪ್ರತಿಕ್ರಿಯೆ ನೀರಸವಾಗಿತ್ತು. ಅಲ್ಲಿ ಇನ್ನು ಸಂಘಟನೆ ಚುರುಕುಗೊಳ್ಳಬೇಕಾಗಿದೆ. ಕಾರ್ಯಕ್ರಮ ನಿರೂಪಣೆ ಮಧ್ಯಾಹ್ನದ ನಂತರ ಚೇತನ ಪಡೆದುಕೊಂಡಿತು ಎಂದು ಜನ ಮಾತನಾಡಿಕೊಳ್ಳುತ್ತಿದ್ದರು. ನೃತ್ಯ ನಾಟಕಗಳು ಪ್ರದರ್ಶನಗೊಂಡಾಗ ಜನ ಹೆಚ್ಚು ಉಲ್ಲಸಿತರಾಗುತ್ತಿದ್ದರು. ಶೋಭಾನೆ ಹಾಡುಗಳು ಬಂದಾಗ ನಿಟ್ಟುಸಿರು ಬಿಡುತ್ತಿದ್ದವರು, ಹಾಡುಗಳ ಒಳಾರ್ಥವನ್ನು ಅರಿತ ಬಳಿಕ ಚಪ್ಪಾಳೆ ಹೆಚ್ಚಾಗಿಯೇ ತಟ್ಟುತ್ತಿದ್ದರು. ಇನ್ನೂ ಹಲವರು ಕಾರ್ಯಕ್ರಮಗಳಿಂದ ಪುಳಕಿತಗೊಂಡು ನೀಡಿದ ಉದಾರ ಕೊಡುಗೆಯೇ ಸುಮಾರು ಹತ್ತು ಸಾವಿರ ರೂಪಾಯಿಗಳಿಗೂ ಮೀರಿತ್ತು. ವೇದಿಕೆಯ ಮುಂಭಾಗದಲ್ಲಿಟ್ಟಿದ್ದ ಸುಂದರ ಕಲಾಕೃತಿಗಳು, ಸಭಾಂಗಣದ ಹಿಂಬದಿಯ ಜನರ ಗಮನಕ್ಕೆ ಬರಲೇ ಇಲ್ಲ. ಭಾನುವಾರವಾದುದರಿಂದ ನಗರದ ಜನರಿಗೆ ಹೆಚ್ಚಿನ ಅನುಕೂಲ ದೊರೆತಂತಾಯಿತು.

ಯಶಸ್ಸು ಸಾಧಿಸಿದ ಸಾಂಸ್ಕೃತಿಕ ಅಕಾಡೆಮಿ :-

ಇದುವರೆಗೂ ಕೊಡಗಿನಲ್ಲಿ ಗೌಡ ಜನಾಂಗ ಸಾಂಸ್ಕೃತಿಕವಾಗಿ ಸಂಘಟನೆಯಾಗಿರಲಿಲ್ಲ. ಉಳಿದ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುತ್ತಿದ್ದರೂ, ಸಾಂಸ್ಕೃತಿಕ ಹಿನ್ನಡೆ ಸಂಘಟನೆಯ ಮೇಲೆ ದುಷ್ಪರಿಣಾಮ ಬೀರಿತ್ತು. ಇದನ್ನು ಮನಗಂಡೇ 'ಕೊಡಗು ಸಂಗಾತಿ'ಯು 'ಸಂಸ್ಕೃತಿ ಸಮಿತಿ'ಯೊಂದನ್ನು ರಚಿಸುವಂತೆ ಗೌಡ ಸಮಾಜ, ವಿದ್ಯಾಸಂಘಗಳ ಮೇಲೆ ಒತ್ತಡ ತಂದಿತ್ತು. ಅದರ ಫಲವಾಗಿಯೇ ತಂಂತಜ್ಜೀರ ಗಣೇಶರವರ ನೇತೃತ್ವದಲ್ಲಿ 'ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ' ಇತ್ತೀಚೆಗೆ ತಾನೇ ರಚಿತಗೊಂಡಿದ್ದು, ರಚಿತವಾದ ಅಲ್ಪಾವಧಿಯಲ್ಲಿಯೇ ಬೃಹತ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿದ್ದೇ ಅಲ್ಲದೇ ನಿರೀಕ್ಷೆಗೂ ಮೀರಿ ಜನರನ್ನು ಆಕರ್ಷಿಸುವಲ್ಲಿ ಸಂಪೂರ್ಣ ಯಶಸ್ಸು ಪಡೆದು, ಜನಸಂಘಟನೆಯ ಹಾದಿಯಲ್ಲಿ ದಿಟ್ಟ ಹೆಜ್ಜೆಯನ್ನಿರಿಸಿದೆ. ಎಲ್ಲಾ ಹಳ್ಳಿಗಳಲ್ಲೂ ಜನರನ್ನು ಸಾಂಸ್ಕೃತಿಕವಾಗಿ ಸಂಘಟನೆಗೊಳಿಸಿ ಬೃಹತ್ ಸಾಂಸ್ಕೃತಿಕ ಸಮ್ಮೇಳನ ನಡೆಸುವತ್ತ ದಾಪುಗಾಲು ಹಾಕಲೆಂಬುದೇ ಸಂಗಾತಿಯ ಮನಪೂರ್ವಕ ಹಾರೈಕೆಯಾಗಿದೆ.

○ ವರದಿ–**ಪಟ್ಟಡ ಶಿವಕುಮಾರ್**

ರಂಝಾನ್ ತಿಂಗಳಲ್ಲಿ ಉಪವಾಸ ವ್ರತವೇಕೆ ?

ಈ ವಿಚಾರವಾಗಿ ಪವಿತ್ರ ಖುರಾನ್‌ನಲ್ಲಿ ಹೀಗಿದೆ.

"ಓ ಸತ್ಯ ವಿಶ್ವಾಸಿಗಳೇ, ಕೆಲವು ನಿರ್ಧಿಷ್ಟ ದಿನಗಳಂದು ಉಪವಾಸ ವ್ರತಾಚರಣೆ ಮಾಡಬೇಕೆಂದು ನಿಮ್ಮ ಪೂರ್ವಜರಿಗೆ ವಿಧಿಸಿದಂತೆಯೇ ನಿಮ್ಮ ಮೇಲೂ ಅಂಥ ವಿಧಿಯನ್ನು ಹೇರಲಾಗಿದೆ. ಅದರ ಆಚರಣೆಯಿಂದ ನೀವು ಬರಲಿರುವ ಕೇಡನ್ನು ಪಾಯಶಃ ನಿರಾಯಾಸವಾಗಿ ನಿವಾರಿಸಬಲ್ಲಿರಿ". ಎಂದು ಹೇಳಿದ್ದಾರೆ.

ಖ್ಯಾತ ವೈದ್ಯ ವಿಜ್ಞಾನಿಗಳು ಉಪವಾಸ ಮಾಡುವವರ ಆರೋಗ್ಯವು ವರ್ಷವಿಡೀ ಯಥೇಚ್ಛ ಭೋಜನ ಮಾಡುವವರ ಆರೋಗ್ಯಕ್ಕಿಂತಲೂ ಉತ್ತಮವೆಂಬ ಮಾತುಗಳನ್ನು ತಿಳಿಸಿದ್ದಾರೆ.

ರಂಝಾನ್ ತಿಂಗಳಲ್ಲಿ ಪ್ರತಿದಿನ ನಸುಕಿನಲ್ಲಿ ಅಂದರೆ ಸೂರ್ಯೋದಯಕ್ಕಿಂತ ಸುಮಾರು ಒಂದುವರೆ ಗಂಟೆ ಮೊದಲು ಅಲ್ಪೋಪಹಾರ ಸ್ವೀಕರಿಸಿ, ಆ ದಿನ ಉಪವಾಸ ವ್ರತ ಆಚರಿಸುವ ಸಂಕಲ್ಪ ಮಾಡಬೇಕಾಗುತ್ತದೆ. ಸೂರ್ಯಾಸ್ತದ ನಂತರ ಮತ್ತು ಮರುದಿನ ನಸುಕಿನ ಮೊದಲು ಊಟೋಪಚಾರಗಳನ್ನು ಸ್ವೀಕರಿಸುವುದರಲ್ಲೂ, ಇಂದ್ರಿಯ ಸುಖ ಅನುಭವಿಸುವುದರಲ್ಲೂ ತಪ್ಪಿಲ್ಲ. ಆದರೂ ಈ ಕುರಿತು ಪ್ರವಾದಿ ಮಹಮ್ಮದರ ಪರಂಪರೆಯನ್ನು ಅನುಸರಿಸಬಯಸುವವರು ಸೂರ್ಯಾಸ್ತದ ನಂತರ ಸರಿಯಾದ ಊಟವನ್ನು ಮಾಡಿ, ಮರುದಿನ ನಸುಕು ಹರಿಯುವ ಮುಂಚೆಯೇ ಅಲ್ಪಾಹಾರ ಸ್ವೀಕರಿಸುತ್ತಾರೆ. ವ್ರತವನ್ನು ಮುಕ್ತಾಯಗೊಳಿಸುವಾಗಲೂ 'ಓ ದೇವರೆ! ನಿನಗಾಗಿ ನಾನು ಉಪವಾಸವ್ರತವನ್ನಾಚರಿಸುತ್ತೇನೆ. ನಿನ್ನೊಬ್ಬನಲ್ಲಿ ಮಾತ್ರ ನಾನು ವಿಶ್ವಾಸವನ್ನು ಇರಿಸಿದ್ದೇನೆ. ನೀನು ಕರುಣಿಸಿದ ಜೀವನಾಧಾರದಿಂದಲೇ ನಾನು ಇಂದಿನ ಉಪವಾಸ ವ್ರತವನ್ನು ಮುಕ್ತಾಯಗೊಳಿಸಿದ್ದೇನೆ. ಇದನ್ನು ಸ್ವೀಕರಿಸು' ಎಂದು ಹೇಳಬೇಕಾದ್ದು ಅವಶ್ಯವಾಗಿದೆ. ಬಡವರಿಗೆ ಬಟ್ಟೆ, ಹಣ, ಧಾನ್ಯ ಹೀಗೆ ಅನುಕೂಲವಾದ ವಸ್ತುಗಳನ್ನು ನೀಡಿ, ಮಸೀದಿಗಳಿಗೆ ಖರ್ಜೂರ, ಹಣ್ಣುಗಳನ್ನು ಕಳುಹಿಸಿ ಉಪವಾಸವಿದ್ದವರಿಗೆ ಕೊಟ್ಟರೆ ಪುಣ್ಯ ಬರುತ್ತದೆ ಎಂಬುದೇ ಇದರ ಮುಖ್ಯ ಅಂಶ.

○ **ಶ್ರೀಮತಿ ಜೀನತ್ ಉನ್ನಿಸಾ ಬೇಗಂ**, ಮಹದೇವಪುರ

ನಾ ಕಂಡಂತೆ ಮಡಿಕೇರಿಯಲ್ಲಿ ಗೌಡ ಸಾಂಸ್ಕೃತಿಕ ಸಮ್ಮೇಳನ

ಕೊಡಗಿನ ಗೌಡ ಇತಿಹಾಸದಲ್ಲಿಯೇ ಕಂಡರಿಯದ ಹಾಗೂ ಕೇಳರಿಯದ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ವತಿಯಿಂದ ನಡೆದ ಕೊಡಗು ಗೌಡ ಸಾಂಸ್ಕೃತಿಕ ಮೇಳ ದಿನಾಂಕ 4-1-1998 ರಂದು ಮಡಿಕೇರಿಯ ಗೌಡ ಕಲ್ಯಾಣ ಮಂಟಪದಲ್ಲಿ ನಡೆಯಿತು. ಇದರ ಧ್ಯೇಯೋದ್ಧೇಶಗಳು ಗೌಡ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಾಗಿತ್ತು. ಇದಕ್ಕೆ ಕೊಡಗು ಗೌಡ ನವ ಯುವಕರ ಒಂದು ತಂಡ ನಮ್ಮ ಸಂಸ್ಕೃತಿಯನ್ನು ಉಳಿಸಿ-ಬೆಳೆಸುವುದಾಗಿ ಪಣ ತೊಟ್ಟು, ಕೊನೆಗೂ ಅತೀ ಕಡಿಮೆ ಸಮಯದಲ್ಲಿ, ಗೌಡ ರೈತರ ತುರ್ತುಕೆಲಸದ ಮಧ್ಯೆಯೂ ನಡೆಯಿಸಿ ಇತಿಹಾಸ ಸೃಷ್ಟಿಸಿತು. ಈ ನಮ್ಮ ಯುವ ತಂಡವನ್ನು ಗೌಡ ಜನಾಂಗ ಎಷ್ಟು ಅಭಿನಂದಿಸಿದರೂ ಸಾಲದು. ಈ ಯುವಕರ ಕಾರ್ಯಕ್ರಮಕ್ಕೆ ಸ್ಪಂಧಿಸಿದ ನಮ್ಮ ಜನಾಂಗವು ಕೊಡಗಿನ ಮೂಲೆ ಮೂಲೆಗಳಿಂದ, ಬೆಟ್ಟ ಗುಡ್ಡ ಹತ್ತಿ, ಇಳಿದು, ಹೊಳೆ ತೋಡುಗಳನ್ನು ದಾಟಿ, ಮುಖದಲ್ಲಿ ನಗೆಯನ್ನು ಬೀರುತ್ತಾ, ಬೆವರಿಳಿಸಿಕೊಂಡು ಬಂದು ಯುವ ತಂಡಕ್ಕೆ ಬೆನ್ನೆಲುಬಿನಂತೆ ಸಹಕರಿಸಿದರು.

ಕಾರ್ಯಕ್ರಮದಂತೆ ಎಲ್ಲವೂ ಚೆನ್ನಾಗಿಯೇ ನಡೆಯಿತು. ಬಂದ ಗೌಡ ಬಾಂಧವರು ಕಾರ್ಯಕ್ರಮವನ್ನು ವೀಕ್ಷಿಸಿ, ಕರತಾಡನದ ಮೂಲಕ ತಮ್ಮ ಮೆಚ್ಚುಗೆಯನ್ನು ತೋರ್ಪಡಿಸಿ, ಕೆಲವು ಕಾರ್ಯಕ್ರಮ ಪ್ರೇಕ್ಷಕರನ್ನು ನಕ್ಕು ನಲಿಸಿದರೆ, ಇನ್ನು ಕೆಲವು ನಮ್ಮ ಸಂಸ್ಕೃತಿಯನ್ನು ಎಳೆ ಮಕ್ಕಳಿಗೆ ಪರಿಚಯಿಸಿದರು. ಬೆಂಗಳೂರಿನಿಂದ ಬಂದ ಅಮ್ಮಾಜಿರ ಪೊನ್ನಪ್ಪನವರ ಗೌಡ ಕುಣಿತ ಮಾತ್ರ ನಮ್ಮ ಗೌಡಜನಾಂಗದ ಕುಪ್ಪಸ,ದಟ್ಟಿ, ರುಮಾಲನ್ನು ಪ್ರದರ್ಶಿಸಿ ನಿಜವಾದ ಕೊಡಗಿನ ಗೌಡರಾಗಿ ವಿಜೃಂಭಿಸಿದರು. ಹಾಗೆಯೇ ರಾಷ್ಟ್ರಮಟ್ಟದಲ್ಲಿ ಮಿಂಚುತ್ತಿರುವ ಕು|| ಗೀತಾ ಮೊಂಟಡ್ಕರವರ ಮಿಮಿಕ್ರಿಯನ್ನು ನೆರೆದಿದ್ದ ಜನಸ್ತೋಮ ನೋಡಿ ಆನಂದಿಸಿತು.

ಮಹಿಳೆಯರದೇ ಮೇಲುಗೈ :

ಈ ಮೇಳದ ಕಾರ್ಯಕ್ರಮಕ್ಕೆ ಬಂದವರಲ್ಲಿ ಮಹಿಳೆಯರದೇ ಪ್ರಾಬಲ್ಯ. ಉಡಿಗೆ ತೊಡಿಗೆಯಿಂದ ಹಿಡಿದು, ಕಾರ್ಯಕ್ರಮದ ಪ್ರದರ್ಶನದಲ್ಲೂ ಅವರೇ ಮುಂದಿದ್ದರು. ಬಂದ ಶೇ. 50ರಷ್ಟು ಮಹಿಳೆಯರು ಗೇಂಟಿಕಟ್ಟಿ ಸೀರೆ ಉಟ್ಟಿದ್ದರು.

ಲೋಪದೋಷಗಳು : ಈ ಮೇಳದ ಕಾರ್ಯಕ್ರಮದಲ್ಲಿ ನನಗೆ ಲೋಪದೋಷಗಳು ಎದ್ದು ಕಾಣುತ್ತಿದ್ದವು. ನಾನು 10-30 ರಲ್ಲಿ ಕಲ್ಯಾಣ ಮಂಟಪದ ಮೆಟ್ಟಿಲೇರುತ್ತಿದ್ದಂತೆ ಎದುರಾದುದ್ದು ಸ್ವಾಗತ ಸಮಿತಿಯವರು. ನನಗೆ ಭವ್ಯ ಸ್ವಾಗತವೇ ದೊರೆಯಿತು. ಇನ್ನೊಂದು ಹೆಜ್ಜೆ ಸಭಾಂಗಣದ ಒಳಗೆ ಇಡುತ್ತಿದ್ದಂತೆ ಎದುರಾದವರು ಅಕಾಡೆಮಿ ಅಧ್ಯಕ್ಷರು. ಹೃದಯಪೂರ್ವಕವಾಗಿ ಬರಮಾಡಿಕೊಂಡರು. ಆದರೆ, ಅಧ್ಯಕ್ಷರು ಕೇವಲ ಒಂದು ರುಮಾಲನ್ನು ಹಾಕಿದ್ದು ಬಿಟ್ಟರೆ ಕುಪ್ಪಸದಟ್ಟಿ ಹಾಕಿರಲಿಲ್ಲ.. ಇಲ್ಲಿ ಅಕಾಡೆಮಿಯವರು ಮೊದಲು ಎಡವಿದ್ದು ಎನ್ನಬೇಕು. 2. ಅಕಾಡೆಮಿಯ ಯಾವ ಕಾರ್ಯಕರ್ತರು

ತಡಿಯಪ್ಪನ ಪೂವಯ್ಯ ಕುಮಾರ್ ಜಯ, ಮೈಸೂರು.

ಸಾಂಪ್ರದಾಯಿಕ ಉಡುಗೆಯಲ್ಲೇ ಇರಲಿಲ್ಲ. 3. ಅಧ್ಯಕ್ಷರು ಯಾವಾಗಲೂ ಅತಿಥಿಗಳೊಡನೆ ಕುಳಿತು ತಮ್ಮ ಕಾರ್ಯಕ್ರಮ, ಅಕಾಡೆಮಿಯ ಉದ್ದೇಶ, ಇದಕ್ಕಾದ ಕಷ್ಟನಷ್ಟ, ಅಕಾಡೆಮಿಯ ಮುಂದಿನ ಕಾರ್ಯಕ್ರಮ ಹೀಗೆ ಚರ್ಚಿಸುತ್ತಾ ಇರುವುದು ಸಾಮಾನ್ಯ. ಆದರೆ ಅಧ್ಯಕ್ಷರು ಸಾಮಾನ್ಯ ಕಾರ್ಯಕರ್ತರಂತೆ ಓಡಾಡುತ್ತಿದ್ದರು. [ಇದು ಅವರ ಮಾನಸಿಕ ಒತ್ತಡ ಹಾಗೂ ಸರಳತೆ ಇರಬಹುದು. 4. ಅತಿಥಿಗಳನ್ನು ವೇದಿಕೆ ಮೇಲೆ ಕೂರಿಸಿಕೊಂಡು ಕಾರ್ಯಕ್ರಮ ಪ್ರದರ್ಶಿಸಿದ್ದು ಸರಿಕಾಣದು. 5. ವೇದಿಕೆ ಮೇಲೆ ಕಾರ್ಯಕ್ರಮ ನಿರೂಪಣೆ ಮಾಡುವವರು ಹಾಗೂ ಅವರಿಗೆ ಸಹಾಯಕ್ಕಾಗಿ ಇಬ್ಬರು ಕಾರ್ಯಕರ್ತರು ಇದ್ದಿದ್ದರೆ ಸಾಕಾಗುತ್ತಿತ್ತು. 6. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಕಾರ್ಯಕ್ರಮ ನಿರೂಪಣೆ ಮತ್ತು ಪರಿಚಯ ಅಷ್ಟೇನು ಹೇಳುವಂತಿಲ್ಲದಿದ್ದರೂ ಮಧ್ಯಾಹ್ನದ ಮೇಲೆ ಸರಿಹೋಯಿತು. 7. ಪತ್ರಕರ್ತರಿಗೆ ಪ್ರತ್ಯೇಕವಾದ ಆಸನದ ವ್ಯವಸ್ಥೆಯಾಗಬೇಕಿತ್ತು. 8. ಆಯ್ದ ಕಾರ್ಯಕ್ರಮಗಳ ಪ್ರದರ್ಶನವಾಗಲಿಲ್ಲ. [ಪೂರ್ವಭಾವಿ ಪ್ರದರ್ಶನವಾಗಬೇಕಿತ್ತು] 9. ಬಹುಮಾನ ವಿತರಣೆ ಅತಿಥಿಗಳಿಂದಲೇ ನಡೆಯಬೇಕಿತ್ತು. 10. ಕೊಡಗು ಗೌಡ ವಿದ್ಯಾ ಸಂಘದವರಿಗೆ ವಂದನಾರ್ಪಣೆಯಲ್ಲಿ ಬೇಸರ ತಂದರೂ, ಜನಾಂಗದ ದೃಷ್ಟಿಯಿಂದ ಪರವಾಗಿಲ್ಲವೆಂದುಕೊಂಡರು. 11. ವೇದಿಕೆ ಮೇಲೆ ಇದ್ದು ನಿರೂಪಿಸುತ್ತಿದ್ದ ಮಹಿಳೆ ಸಾಂಪ್ರದಾಯಿಕ ಉಡುಗೆಯಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. 12. ನಮ್ಮ ಜನಾಂಗದ ಏಕೈಕ ಪತ್ರಿಕೆ "ಕೊಡಗು ಸಂಗಾತಿ" ಸಂಪಾದಕರಿಗೆ ಅತಿಥಿಗಳೊಡನೆ ಕೂರುವ ವ್ಯವಸ್ಥೆಯಾಗಬೇಕಿತ್ತು.] ಈ ಲೋಪಗಳು ಹೆಚ್ಚಿನ ಪ್ರೇಕ್ಷಕರಿಗೆ ಗೊತ್ತಾಗದೇ ಇದ್ದು ಕಾರ್ಯಕ್ರಮ ಯಶಸ್ವಿಯಾಗಿ ನಡೆದುದರಿಂದ ಜನಾಂಗದವರ ಹೊಗಳಿಕೆಗೆ "ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ" ಪಾತ್ರವಾಯಿತು.

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಮುಂಬರುವ ಯಾವುದೇ ಕಾರ್ಯಕ್ರಮ ದಲ್ಲಿ ಈ ರೀತಿಯ ಚಿಕ್ಕಪುಟ್ಟ ಲೋಪಗಳು ಆಗದ ರೀತಿ ಎಚ್ಚರ ವಹಿಸಿದರೆ ಮತ್ತು ಹಿರಿಯ ಅನುಭವಿಗಳ ಸಲಹೆ ಸಹಕಾರ ಪಡೆದು ಮುನ್ನಡೆದರೆ ಗೌಡ ಜನಾಂಗದ ಅಭಿನಂದನೆಗೆ ಪಾತ್ರವಾಗುವುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ.

ಓದುಗರು ಈ ಮೇಲೆ ಬರೆದಂತಹ ವಿಚಾರ ಗಳನ್ನು ಟೀಕೆ ಎಂದು ಭಾವಿಸಬಾರದು. ಇದು ನನ್ನ ವೈಯಕ್ತಿಕ ಸಲಹೆ. ಈ ಸಲಹೆಯನ್ನು ಸ್ಫೂರ್ತಿಯಿಂದ ತೆಗೆದು ಕೊಳ್ಳುವುದು, ಬಿಡುವುದು "ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ"ಗೆ ಬಿಟ್ಟದು.

ತಪ್ಪು ಮಾಡುವುದು ಸಹಜ. ಅದನ್ನು ಒಪ್ಪಿ, ತಿದ್ದಿ ನಡೆಯುವುದು ಮನುಷ್ಯ ಧರ್ಮ, ಇದಕ್ಕೆ ನಮ್ಮ ಜನಾಂಗ ಮಾದರಿಯಾಗಿರಲಿ. ●

[4ನೇ ಪುಟದಿಂದ]

ಅಪ್ಪಯ್ಯಗೌಡರ ಸ್ಮಾರಕ ನಿರ್ಮಾಣ ವೇದಿಕೆ ರಚಿಸಿ, ಚರ್ಚಿಸಿ ಪ್ರಚಾರ ಪಡಿಸಿದ ಕೀರ್ತಿ ಇವರದು.

ಇವರು ಚಿಕ್ಕ ಪ್ರಾಯದಿಂದಲೇ ಕಾಲ ಕಂಡ ತನ್ನ ಅಣ್ಣನ ಮಕ್ಕಳನ್ನು ಸ್ವಂತ ಮಕ್ಕಳಂತೆ ಸಾಕಿ ಸಲುಹಿದ್ದಾರೆ. ಇವರ ಅಣ್ಣನ ಒಬ್ಬ ಮಗ ತ್ಯಾಗರಾಜ ಇನ್ನೊಬ್ಬ ಉದಯಕುಮಾರ್ ಮಿಲಿಟರಿ ಸೇವೆ ನಂತರ ಈಗ ಪೋಲಿಸ್ ಸೇವೆಯಲ್ಲಿದ್ದಾರೆ. ಇವರ ಒಬ್ಬ ಮಗ ಜಯಪ್ರಕಾಶ್ ಮಿಲಿಟರಿ ಯಲ್ಲಿದ್ದರೆ, ಕಿರಿಯ ಮಗ ಗಣೇಶ್ ಮನೆಯ ವ್ಯವಹಾರದಲ್ಲಿ ತೊಡಗಿದ್ದಾರೆ.

ಇಷ್ಟೆಲ್ಲಾ ಪ್ರಾಮಾಣಿಕತನದಿಂದ ದುಡಿದ ಇವರ ಮನಸ್ಸಿನ ಅಭಿಪ್ರಾಯಕ್ಕೆ ವಿರುದ್ಧ ಅಭಿಪ್ರಾಯಗಳು ಬಂದುದರ ಸತ್ಯ ಹಿನ್ನೆಲೆಯಲ್ಲಿ, ತನ್ನ ಮಾತಿಗೆ ಬೆಲೆ ಕೊಡದೆ ಬೇರೆಯವರು ನಡೆದು ಕೊಂಡ ರೀತಿಯಿಂದ ಅಪಾರ ಮನನೊಂದು ತಮ್ಮನ್ನು ತಾವೇ ಪರಮಾತ್ಮನಲ್ಲಿ ದಿನಾಂಕ 18-1-1997ರಲ್ಲಿ ಲೀನ ವಾಗಿರಿಸಿಕೊಂಡರು.

ಭಾಗಮಂಡಲ ನಾಡಿನಲ್ಲಿ ಅಪಾರ ಸೇವೆಗೈದು ಜನಾಂಗದ ದೃಷ್ಟಿಯಲ್ಲಿ ಮಾದರಿಯಾಗಿ ಪರಿವರ್ತಿತ ವ್ಯಕ್ತಿ ಯಾಗಿ ನಿಂತ ಶ್ರೀಯುತರ ಸೇವೆಯನ್ನು "ಕೊಡಗು ಸಂಗಾತಿ" ಮೆಚ್ಚಿ ಜನಾಂಗದ ಬಂಧುಗಳಿಗೆ ಪ್ರಚಾರಪಡಿಸಲು ಹೆಮ್ಮೆ ಪಡುತ್ತದೆ.

ವರದಿ : **ಪ.ಮು.ಪ್ರ**

ನಗೆ ಹನಿ


ಅಧಿಕಾರಿ : ನಿನ್ನ ಹೆಸರೇನಪ್ಪ ?
ಅಭ್ಯರ್ಥಿ : ನಂದ ಸಾರ್
ಅಧಿಕಾರಿ : ಹೌದು ಕಣೋ ನಿಂದೆ
ಅಭ್ಯರ್ಥಿ : ನಂದ ಸಾರ್
ಅಧಿಕಾರಿ : ಹೌದೋ ಮುಠ್ಠಾಳ ನಿಂದೇ
ಅಭ್ಯರ್ಥಿ : ಸಾರ್, ನನ್ನ ಹೆಸರೇ ನಂದ ಅಂತ !

○ **ಕೆ.ಎಸ್. ನಿವೇದಿತ, ಬಲ್ಲಮಾವಟಿ**

"ಇಂದಿರಾಗಾಂಧಿ ರಾಷ್ಟ್ರೀಯ ಪ್ರಶಸ್ತಿ" ಪಡೆದ ಶ್ರೀ ನಂಗಾರು ಪುಟ್ಟು ಮೋನಪ್ಪ

ಮದೆ ಗ್ರಾಮದ ಜೋಡುಪಾಲದ ಶ್ರೀ **N.P.** ಮೋನಪ್ಪ ಇವರು ಸಾರ್ವಜನಿಕ ಉದ್ದಿಮೆಗಳಲ್ಲಿ ಮೀಸಲಿಡುವ "ಅತ್ಯುತ್ತಮ ದುಡಿಮೆಗಾರ ಪ್ರಶಸ್ತಿ" ಗೋಸ್ಕರ ರಾಷ್ಟ್ರಮಟ್ಟದ ಇಂದಿರಾಗಾಂಧೀ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳಿಸಿದ ಕರ್ನಾಟಕದ ನಾಲ್ಕು ಜನರಲ್ಲಿ ಇವರು ಒಬ್ಬರು. 29-11-97ರಂದು ಹೈದರಬಾದ್‌ನಲ್ಲಿ ನಡೆದ ಸಮಾರಂಭದಲ್ಲಿ ಆಂಧ್ರ ಪ್ರದೇಶದ ಮಾಜಿ ಶಿಕ್ಷಣ ಮಂತ್ರಿ ಪಿ.ವಿ. ರಂಗರಾವ್ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು.

ಇದು ಇವರು ಸೇವೆಸಲ್ಲಿಸುತ್ತಿರುವ **BHEL** ಕಾರ್ಖಾನೆಗೆ ಮಾತ್ರ ಅಲ್ಲದ ನಮ್ಮ ಗೌಡ ಜನಾಂಗಕ್ಕೆ ಹೆಮ್ಮೆ ಮತ್ತು ಕೀರ್ತಿಯನ್ನು ತಂದಿರುತ್ತಾರೆ. ಮದೆ ಗ್ರಾಮದ ಜೋಡುಪಾಲದ ದಿವಂಗತ



ಶ್ರೀ ನಂಗಾರು ಪುಟ್ಟು ಮೋನಪ್ಪ

ಪುಟ್ಟು ಮತ್ತು ಶ್ರೀಮತಿ ಮುದ್ದಮ್ಮ ದಂಪತಿಗಳಿಗೆ ಜನಿಸಿದ 6 ಗಂಡು 1 ಹೆಣ್ಣು ಮಕ್ಕಳಲ್ಲಿ ಇವರು ಎರಡನೆಯವರು. ಇವರು ಮೂರ್ನಾಡಿನ ಬೊಳ್ತಜೀರ ದಿವಂಗತ ಸೋಮಯ್ಯನವರ ಪ್ರಥಮ ಪುತ್ರಿ ಪುಷ್ಪಾರವರನ್ನು ವಿವಾಹ ಆಗಿದ್ದು, ಇವರು ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಲ್ಲಿ ಶುಶ್ರೂಶಕಿ ಆಗಿದ್ದಾರೆ. ಇವರಿಗೆ ಕುಸುಮ ಎಂಬ ಒಬ್ಬಳೆ ಮಗಳು. ಅವಳು ಒಂದನೇ ತರಗತಿಯಲ್ಲಿ ಓದುತ್ತಿದ್ದಾಳೆ.

ವರದಿ : **ಕಲ್ಲುಮುಟ್ಲು ಬಸಪ್ಪ,**
ಬೆಂಗಳೂರು

ನಿಮ್ಮ ಪತ್ರಗಳು

ನಮ್ಮ ಗೌಡುಗ ಓ.ಬಿ.ಸಿ. ಲಿ ಬಂದವೆಯಾ, ಇಲ್ಲ್ಯಾ?

ಮಾನ್ಯರೆ,

ನವಂಬರ್ ತಿಂಗಳ 15 ನೇ ಸಂಚಿಕೇಲಿ ಪ್ರಕಟ ಆಗಿರೋ ತಿಮ್ಮಯ್ಯ ಸುರೇಶ್ ಕುಮಾರಿ ಅವರ P.M.R.Y. ಬಗ್ಗೆ Article ತುಂಬಾ ಪ್ರಯೋಜನಕಾರಿಯಾಗುಟ್ಟು. ಆದ್ರೆ ನಮ್ಮ ಗೌಡ ಜನಾಂಗದವು ಓ.ಬಿ.ಸಿ. ವರ್ಗಲಿ ಬಂದವೆತೇಳುವ ವಿಷಯ ಚರ್ಚಾಸ್ಪದ.

ಕ. ರಾಜ್ಯ ಸರ್ಕಾರದ ಸುತ್ತೋಲೆ ಪ್ರಕಾರ SL. No. 101 (m)ನ ಕೆಳಗೆ ಗೌಡತ [GOWDA] ಸೇರ್ಸಿಯೊಳೊ. ಆದ್ರೆ ಕೇಂದ್ರ ಸರ್ಕಾರದ ದಿನಾಂಕ 10 Sept. 93ರ ಆದೇಶದ ಪ್ರಕಾರ ಒಕ್ಕಲಿಗ ಗೌಡರು ಮಾತ್ರ ಓ.ಬಿ.ಸಿ.ಗೆ ಬಂದವೆ, ಗೌಡಂಗ ಬಾದುಲೆ. ಅದೇ 'ಕೊಡವ'ಜಾತಿಯವು ರಾಜ್ಯ ಮತ್ತೆ ಕೇಂದ್ರ ಸರ್ಕಾರ ಎರಡರ್ಲ್ಲೂ ಓ.ಬಿ.ಸಿ. ಕೆಳಗೆ ಬಂದವೆ. ಇದ್ರಿಂದ ಕೇಂದ್ರ ಸರ್ಕಾರದ ಹುದ್ದೆಗಳಿಗೆ ಗೌಡುಗಳಿಗೆ ಮೀಸಲಾತಿ ಇಲ್ಲೆ. ನಿಜವಾಗಿ ಹಿಂದೆ ಉಳ್ದಿರೋ ನಮ್ಮ ಜನಕ್ಕೆ ಮಾಡಿರೊ ವಂಚನೆ ಇದ್.

ಈ ವಿಷಯನ ಸರ್ಕಾರದ ಗಮನಕ್ಕೆ ತಂದ್ ನಮ್ಮ ಜನಕ್ಕೂ ಕೇಂದ್ರ ಸರ್ಕಾರದ ಹುದ್ದೆಗಳಿಗೆ ಮೀಸಲಾತಿ ಸಿಕ್ಕುವಂಗೆ ಮಾಡಿಕೆ ಪ್ರಯತ್ನ ಪಡೋಕು ತೇಳಿ ಸಂಬಂಧಪಟ್ಟವ್‌ಕೆ ನಾನ್ ಈ ಪತ್ರದ ಮುಖೇನ ಕೇಳಿಕಣ್ತಾ ಒಳೆ.

● ಎಡಿಕೇರಿ ಸುದರ್ಶನ್, ಬೆಂಗಳೂರು.

ವ್ಯತ್ಯಾಸ

ಮಾನ್ಯರೆ,

ಕೊಡಗು ಸಂಗಾತಿಯ ನಿರಂತರ ಓದುಗರಲ್ಲಿ ನಾನೂ ಒಬ್ಬ.

ಹುತ್ತರಿ ಹಬ್ಬಕ್ಕೆ ಮೊದಲು ಬಂದ ಸಂಚಿಕೆಯಲ್ಲಿ ಅರೆಭಾಷೆಯ ಬಗ್ಗೆ ಬರೆದ ನಿಮ್ಮ ಸಂಪಾದಕೀಯ ಅರೆಭಾಷೆಯ ಮುನ್ನಡೆಗೆ ಪ್ರಚೋದನೀಯವಾಗಿತ್ತು. ಆದರೆ ಅರೆಭಾಷೆಯನ್ನಾಡುವ ಜನಾಂಗದವರನ್ನು ಹೆಸರಿಸುವಾಗ 'ಹವೀಕರು ಅಂತ ಸೇರಿಸಿದುದು ಸರಿಯಲ್ಲ. ಏಕೆಂದರೆ ಅದೇ ಬೇರೆ ಮತ್ತು ಇದೇ ಬೇರೆ. ಒಂದು ಮುಖ್ಯ ವಿಷಯ ಏನೆಂದರೆ ಇವೆರಡಕ್ಕೂ ಹಲವಾರು ಶಬ್ದಗಳಲ್ಲಿ ಸಾಮ್ಯತೆ ಇರುವುದು. ಅವರಾಡುವ ಭಾಷೆಗೆ ಹವ್ಯಕ ಭಾಷೆ ಅಂತ ಹೆಸರು. ಸುಳ್ಯ ತಾಲ್ಲೂಕಿನ ಅರೆಭಾಷೆಯನ್ನಾಡುವ ಗೌಡಜನಾಂಗದವರಿಗೆ ಇದರ ಪರಿಚಯ, ವ್ಯತ್ಯಾಸ ಚೆನ್ನಾಗಿ ಗೊತ್ತು. ಈ ಎರಡೂ ಸೋದರ ಭಾಷೆಗಳ ಮಾತೃಸ್ಥಾನದಲ್ಲಿರುವುದು ಹಳೆಗನ್ನಡವೆನ್ನುವುದನ್ನು ಮರೆಯದಿರೋಣ.

● ಎ.ಕೆ. ಚಂದ್ರಶೇಖರ್ ಭಟ್, ಮಡಿಕೇರಿ.

ಧೃತಿಗೆಡ್ಬಡಿ

ಮಾನ್ಯರೆ,

"ಕೊಡಗು ಸಂಗಾತಿ" ಪತ್ರಿಕೆ ನಮ್ಮ ಕೈ ಸೇರ್‍ತಾ ಉಟ್ಟು. ಅದನ್ನ ಓದಿ ನಮಿಗೆ ತುಂಬಾ ಖುಷಿ ಆತ್. 'ಅರೆ ಭಾಷೆಗೆ' ತುಂಬಾ ಪ್ರಾಮುಖ್ಯತೆ ಕೊಟ್ಟೋಳರಿ. ಆದರೆ ಇನ್ನೂ ಹೆಚ್ಚಿಗೆ ಅರೆಭಾಷೆಲಿ ಪ್ರಕಟಗೊಳ್ಳಕ್ಕುತ್ತಾ ನಮ್ಮ ಆಸೆ. ಈ ಗೌಡ ಪತ್ರಿಕೆ ಪ್ರತಿಯೊಬ್ಬ ನಮ್ಮ ಗೌಡ ಜನಕ್ಕೆ ಅಚ್ಚುಮೆಚ್ಚಿನ ಪತ್ರಿಕೆಯಾಗಿ ಪ್ರಜ್ವಲಿಸಲಿತೇಳಿ ನಾವು ಮನಸಾರೆ ಹಾರೈಸುವೆ.

ತುಂಬಾ ಜನ ನಿಮಿಗೆ ಧೃತಿಗೆಡುವ ಹಾಗೆ ಮಾಡಿಕೆ ಪ್ರಯತ್ನ ಮಾಡುವೋ, ಅಂತೂ ನೀವು ಧೃತಿಗೆಡದೆ ನಮ್ಮ ಈ ಗೌಡ ಪತ್ರಿಕೆ ಇನ್ನೂ ಲಾಯಿಕ್ ಆಗಿ ಬೆಳ್ಸಿತ್ತೇಳಿ ನಾನ್ ದೇವರಲ್ಲಿ ಪ್ರಾರ್ಥಿಸಿನೆ.

● ಸಿ. ಯು. ರತ್ನ
W/o ಡಾ|| ಸಿ. ಕೆ. ಉತ್ತಪ್ಪ, ಬೆಂಗಳೂರು.

ಹೃತ್ಪೂರ್ವಕ ವಂದನೆ

ಬಿ.ಆರ್. ಜೋಯಪ್ಪನವು ಬರ್‌ದಂತ "ಅಪ್ಪಂಗೆ ತರಾ... ಅಪ್ಪಂಗೆ ಕುರಾ ನಂಗೆ ಎಮ್ಮೆ ಪಾರ" ಮತ್ತೆ ಎಂ.ಯು.ನಾಗೇಶ್ ಬರ್‍ದ ಹಾಸ್ಯ ಲೇಖನ "ಇಂಟ್ರ" ತುಂಬಾ ಲಾಯ್ಕ ಬಂದುಟ್ಟು. ಈ ಅರೆಭಾಷಿಕ ವಿಭಾಗನ ಇನ್ನ್ ಜಾಸ್ತಿಯಾಗಿ ಹೆಚ್ಚಿಸೊಕುತ್ತಾ ಕೇಳಿಕಣೆ.

● ಮುಂಞಾಣ್ಣನ ಸೋನಿ, ಕಾಲೂರು.

ತುಳು ಭಾಷೆಗೂ ಪ್ರೋತ್ಸಾಹ ನೀಡಿ

'ಕೊಡಗು ಸಂಗಾತಿ' ಪತ್ರಿಕೆಯು ತುಂಬಾ ಲಾಯ್ಕಲಿ ಬರ್‍ತುಟ್ಟು. ಅದರಲ್ಲಿ ಬರುವಂತ ಅರೆಭಾಷೆ ಕತೆನ ಓದುಕನ ತುಂಬಾ ಖುಷಿ ಆದೆ. ಹಂಗೆ ಅರೆಭಾಷೆಗೆ ನೀವು ಯಾವ ತರಹ ಪ್ರೋತ್ಸಾಹ ಕೊಡ್ತವಳರಿಯೋ ಅದೇ ತರಹ ತುಳು ಭಾಷೆಗೂ ಸಹ ಪ್ರೋತ್ಸಾಹ ಕೊಡಿ ಮತ್ತೆ ಅರೆಭಾಷೆ ಸಂಸ್ಕೃತಿ ಒಟ್ಟಿಗೆ ತುಳು ಸುಸ್ಕೃತಿ ಸಹ ಇರಲಿತ ನಾ ಕೇಳಿಕಣೆ.

● ಯಂ.ಜಿ. ಹರಿಣಿ ಗೋಪಾಲ್, ಬೆಂಗಳೂರು.

ಅರೆ ಭಾಷಿಕ ವಿಭಾಗ

"ಕತ್ತಲೆ ಕಳ್ದ್‌ದ್..."

ದೇವ್‌ಪುರಾಣೆ ಮಾಡಿ ಹೇಳುದಾದರೂ ಆದರ್‌ಂದ ಮುಂದೆ ಜೋಮಣ್ಣ ಪೇಟೆಂತ ಕಂಡದ್ ಬರೀ ಮೂರ್ ಸರ್ತಿ. ಸುರುಗೇಂತ ಹೇಳ್ರೆ ಶಂಕರಿನೊಟ್ಟಿಗೆನ ಅಂವನ ಮದುವೆಂದಳೂ ಮುಂದೆ, ಅದೂ ಹಿಂದೆ ಮುಂದೆ ಗೊತ್ತಿಲ್ಲದೆ ಬೀಟೆಮರ ಕಡ್ದ ಕಾರಣಂದ. ಬೀರಿಕಿಚ್ಚಿಗೆ ಬುಡದ ಚೂಲಿ ಹೊತ್ತಿಕೋಗಿ ಅರೆಜೀವ ಆಗಿದ್ದ ರಟ್ಟೆ ತೋರದ ಆ ದೈನ ಕಡ್ದ್ ನೀರಡಿ ಒಲೆಗೆ ಆ ದೂಂತ ತುಂಡ್‌ಮಾಡಿ ತೆಕಂಡ್ ಹೊದ್ದ್ ಅದೇ ಊರಂವ ಪುಣ್ಯಾತ್ಮ ನಾರ್ಣುಗಾರ್ಡ್‌ಂಗೆ ಹೇಂಗೆ ಗೊತ್ತಾತೋ, ಅಂತೂ ಜೋಮಣ್ಣ ಅರ್ಧದೂರ ಮರದ ಕುಂಟೆನ ಹೊತ್ತ್‌ದ್ ಕಾಡ್‌ದಾರಿಲಿ ನಡ್ಕಂಡ್, ಇನ್ನ್ ಅರ್ಧದೂರ ರೇಂಜರ ಜೀಪ್‌ಲಿ ಮರದ ತುಂಡ್‌ನೊಟ್ಟಿಗೆ ಹಿಂದೆ ಚುರ್ಕ್ಕರ ಕುದ್ದ್‌ದ್ ಹಿಂಗೆ ಪೇಟೆಗೆ ಅಂವನ ಸುರುನ ಪ್ರಯಾಣ ಹೋಗಿತ್ತ್. ಅಂವನ ಹಣೆಬರ ಗಟ್ಟಿ ಇತ್ತ್, ನಡ್ದ ಎಲ್ಲ ಸಂಗತಿ ದೊಡ್ಡದಣಿಗೆ ಗೊತ್ತಾಗಿ ಅವು ಇಂವನ ಪರ ದಂಡಕಟ್ಟಿ ಬುಡ್ಸದಿದ್ದರೆ ಅಂವ ಇನ್ನೂ ಹದ್‌ನೈದ್ ದಿನ ಹೆಚ್ಚಿಗೆ ಮಂಗ್ಳೂರೆಣ್ಣೆ ಹಾಕಿ ಪೂಜ್‌ಸಿಕಣಕಾಗಿತ್ತೇನೋ, ವರ್ಷಗಟ್ಟಳೆ ಕೋರ್ಟ್, ಕೇಸ್‌ಂತ ಓಡಿಯಾಡಕಾಗಿತ್ತೇನೋ! ಅಂತೂ ಮುಂದೇ ಗಾಬರಿ ಹುಟ್ಟ್‌ಸ್ತಿದ್ದ ಪೇಟೆಂತ ಹೇಳುವ ಹೆಸರ್ ಈ ಅನುಭವಂದಾಗಿ ಕಟ್ಟೆ ಕನ್ಸಾಗಿ ನಿದ್ದೆ ಕೆಡ್ಸಿಕೆ ಸುರ್ ಮಾಡ್ತ್. ಹಾಂಗಾದರೂ ಶಂಕರಿನ ರಗಳೆ ತಡಿಯಕಾಗದೆ ಮದುವೆ ಆದ ಹೊಸ್ತರ್ಲಿ ಇಬ್ಬರೂ ದೊಡ್ಡಜಾತ್ರೆ ನೋಡಿಕೇಂತ ಪೇಟೆಗೆ ಹೋಗಿದ್ದೊ. ಆಗಳೂ ಅಷ್ಟೆ, ಎದೆ ನಡ್ಗ್‌ಸುವ ಮರಣಗುಂಡಿ ನೋಡಿ, ಹೊಟ್ಟೆತೊಳ್ಸುವ ತೊಟ್ಗೆಲ್‌ಲಿ ಕುದ್ದ್‌ದ್, ಗಾಣದ ಕೊಟಗೆಲಿ ಒಂದೊಂದು ಗಲಾಸ್ ಕಬ್‌ನ ಹಾಲ್ ಕುಡಿವಷ್ಟರ್ಲಿ ಬೂಡ್ಸ್‌ಕಾಲ್ ದಪದಪ ಹಾಕಿ ನಡ್ಯತಿದ್ದ ಫಾರೆಸ್ಟ್‌ಗಾರ್ಡ್‌ಗಳೋ, ಪೋಲೀಸರೋ ಯಾರೋ, ಆ ಯುವ ದೂತರ ಕಣ್ಣ್ ತಪ್ಪ್‌ಸಿ ಓಡೋಡುದೇ ಕಷ್ಟ ಆಗಿ ಹೇಂಗೊ ಸಂತೆತಿರ್ಗ್ನಾಟ, ಮಣಿಸರ್ಕ್ ವ್ಯಾಪಾರ ಆದಷ್ಟ್ ಬೇಗ ಮುಗ್ಸಿ ಊರ್‌ಗೆ ವಾಪಾಸ್ಸಾಗಿದ್ದೊ.

ಇದ್ ಆದ ಮಾರನೇ ವರ್ಷ ಶಂಕರಿ ಪೊರ್ಲ್‌ನ ಹೆಣ್ಣ್ ಕೂಸ್‌ನ ಹೆತ್ತತ್. ಕೊತಕೊತ ಕುದಿವ ನೀರ್ ಹೊಯ್ದ್‌ದ್ ಪೆದ್ದೋಳ್ತಿ ಮೀಸುವ ಸಡಗರಲಿ ಶಂಕರಿನ ಬೆಳ್ಳಿ ತಾಳಿಕಂಠಿನ ಬಂಗಾರದೊಪ್ಪ ಮಾಸಿ ಅದ್ ಬೆಳ್ಳಂಗೆ ಆಗಿಹೋತ್. ಅದೇ ಸಮಯಲಿಯೇನೋ... ಹುಟ್ಟ್‌ಸಾವ್ ಒಂದರ ಹಿಂದೆ ಒಂದ್ ಅಲ್ಲೋ. . ಊರ್‌ಗೊಬ್ಬ ಸೊನ್ನೆಗಾರಂತ ಇದ್ದಂವ ಕೃಷ್ಣಸೆಟ್ಟಿ ಬೆನ್ನ್ ನಟುಲಿ ರಾಜ ಹುಣ್ಣಾಗಿ ಚಟ್ಟೆ ಕಟ್ಟಿತ್. ಬೇರೆ ದಾರಿ ಕಾಣದೆ ಈ ತಾಳಿಕಂಠಿನ ಹಿಡ್ಕಂಡ್ ಅದ್ಕೆ ಚಿನ್ನದ ನೀರ್ ಕೊಡ್ಸಿಕೆ ಜೋಮಣ್ಣ ಮತ್ತೊಮ್ಮೆ ಪೇಟೆಗೆ ಹೋಕಾತ್. ಎದೆ ಒಳಗೆ ಪುಕ್ಕಲ್ ಅವುಲಕ್ಕಿ ಮಿಜಿಯತ್ತಿದ್ದರೂ ಈ ಸರ್ತಿ ವಿಶೇಷ ಏನೂ ನಡಿಯದೆ ಮೂರ್ನೆ ಪ್ರಯಾಣ ಯಾವುದೇ ತೊಂದರೆ ಇಲ್ಲದೆ ಕಳ್ತ್. ಆದರೆ, ಮೂರಕ್ಕೇ ಮುಕ್ತಿಯಾಗಿದ್ದರೆ ಒಳ್ಳೆದಿತ್ತ್. ಅವನ ದುರದೃಷ್ಟಕ್ಕೆ ಮತ್ತೆ ನಾಕೈದ್ ತಿಂಗಳ್ಲೇ ಪುನ ಪೇಟೆಗೆ ಹೋವ ಸಂದರ್ಭ ಅಂವನ ಹುಡ್ಕಿಕಂಡ್ ಬಾತ್... ಅದರ ಕತೆ ಕೇಳಿ...

ಮದುವೆ ಆಗಿ ಎಂಟ್ ವರ್ಷ ಕಳ್ದ ಮೇಲೆ ಅದ್ ಹೆಂಗೋ ಸಣ್ಣದಣಿಗೆ ಒಂದ್ ಕೂಸ್ ಹುಟ್ಟಿತ್. ಅಪರೂಪದ ಕೂಸ್‌ಂತ ಹೇಳ್ದ ಮೇಲೆ ಆದರ ಸಡಗರ ಹೆಳೊಕೋ? ಕೂಸ್‌ನ ತೊಟ್ಗೆಲ್ ತಾಕೆ ಸಣ್ಣದಣಿನ ಮತ್ತೆ ಅವ್ವನ ಬುಟ್ಟ್‌ದ್ ಉಳ್ದ ಮನೆಯವ್ವು, ನೆಂಟರಿಷ್ಟರ್... ಅಂದರೆ ಸ್ವಂತ ದೊಡ್ಡ ಧಣಿಗ, ಈ ಜಂಬರಕ್ಕೆಂತಳೇ ತೌರ್‌ಗೆ ಬಂದಿದ್ದ ಅವರ ಮೂರ್ ಜನ ದೊಡ್ಡ ಮಗಕ್ಕ, ಅವರ ಗಂಡಂದರ್, ಕೊಡಿಕೆ ತಯಾರಾಗಿ ಮನೆಲಿರುವ ಇನ್ನ್ ಇಬ್ಬರ್ ಸಣ್ಣ ಮಗಕ್ಕ, ಎಲ್ಲವರ್‌ಂದ ಸಣ್ಣಂವ, ದೊಡ್ಡಪೇಟೆಲಿ ಶಾಲೆಗೆ ಹೋಂವ ಕುಂಞಧಣಿ, ಒಬ್ಬನೋ ಇಬ್ಬರೋ ದೂರದ ನೆಂಟ್ರ್, ಇವರ ಎಲ್ಲವರ ಕೈಕಾಲ್‌ಗೆ ಇರ್ವ ಕೆಲ್ಸದವ್, ಹಿಂಗೆ ಒಂದು ಸಣ್ಣ ದಿಬ್ಬಣದಷ್ಟ್ ಪಟಾಲಮ್ಮ್ ಸಣ್ಣಕ್ಕನ ತೌರೂರ್‌ಗೆ ದಿನಮುಂದಾಗಿನೇ ಹೋಗಿತ್ತ್. ಇನ್ನೇನ್ ಆ ದಿನ ಬೊಳ್ಪುಗೆ ಬಿಸ್‌ಲ್ ಕಾರ ಆಕೆ ಮುಂದೆನೇ ನೆಂಟರಲ್ಲಿಂದ ಹೊರ್ಟ್‌ದ್ ಏಳೆಂಟ್ ಮೈಲ್

○ **ಕೆ. ಆರ್. ವಿದ್ಯಾಧರ್** ಮಡಿಕೇರಿ

ದೂರದ ಕಾಡ್‌ದಾರಿಲಿ ನಡ್ದ್‌ದ್ ಮಧ್ಯಾಹ್ನದೊಳಗೆ ಕೂಸನ ತೊಟ್ಗೆಲ್‌ನೊಟ್ಟಿಗೆ ಎಲ್ಲವೂ ಮನೆಗೆ ಬಂದವೆ. ಕೂಸ್, ಕೂಸ್‌ನ ಆಯ್ಯೆ ಅಲ್ಲದೆ ಅವರೊಟ್ಟಿಗೆ ಸಣ್ಣಕ್ಕನ ಮನೆಂದ ಅವರ ಅವ್ವ, ಮಕ್ಕಮರಿ ಇಲ್ಲದ ಅವರ ಅಪ್ಪನ ಸುರ್‌ನ ಹೆಣ್ಣ್ ದೊಡ್ಡವ್ವ, ಒಂದೋ ಎರಡೋ ಚಿಕ್ಕಪ್ಪಂದರ್, ಚಿಕ್ಕಮಂದರ್, ಅಕ್ಕತಂಗೆ, ಅಣ್ಣತಮ್ಮಂದರ್ ಮತ್ತೆ ಯಥಾಪ್ರಕಾರ ಕೆಲ್ಸದವು ಹಿಂಗೆ ದಂಡ್ ಭಾರಿ ದೊಡ್ಡದಾಗಿದ್ದದೆ. ಇದರ ಎಡೆಲಿ, ಬೆಳ್ಗಾರ್‌ಗೆಎದ್ದ ಅವ್ವ ಪಾಯ್ಸಕ್ಕೆ ತಂದಿದ್ದ ಪದ್‌ಂಜಿ ಬೇಳೆನ ಡಬ್ಬಿಂದ ತಗ್ದ್‌ದ್ ನೋಡಿವೆ... ಎಂಥ ಜೈಂಬೋ ಆ ಕಲ್ಲುರ್ಟೆಗೇ ಗೊತ್ತ್... ಕಪ್ಪ್ ಗುಗ್ಗುರ್‌ನೂ, ಬೆಳ್ಳಂಗೆ ಹುಳ್‌ಗಳೂ.. ಒಟ್ಟಿಗೆ ಮಿಲಿಮಿಲಿ ಮಿಜ್‌ಲಿವೆ... ಇನ್ನ್ ಎಂತದ್ ಮಾಡ್ದು, ಯಾರ್ನ ಪೇಟೆಗೆ ಕಳ್ಸದು? ಸಂಕಪ್ಪ, ರೇಕೋಜಿ, ತ್ಯಾಂಪಣ್ಣ, ಮುವರ ಎಲ್ಲವೂ ಕೂಸ್‌ನ ತೊಟ್ಗೆಲ್ ತಾಕೆ ಹೋದವರೊಟ್ಟಿಗೇ ಹೋಗೊಳೊ. [ಮುಂದುವರ್ದದೆ]

ವಿಚಾರ ಮಂಥನ : ಸಾಮಾಜಿಕ ನಡೆ ನುಡಿ

ಒಂದು ಜನಾಂಗನ ಅಭಿವೃದ್ಧಿಶೀಲ ಜನಾಂಗಂತ ಕರೆಯುಕ್ಕುಂತಾದರೆ ಆ ಜನಾಂಗದ ಸರ್ವಾಂಗೀಣ ನಡೆನುಡಿನ ಅವಲಂಭಿಸಿಕಂಡ್‌ಟು. ಜನಾಂಗದ ಸಾಮಾಜಿಕ ನಡೆನುಡಿಗೆ ಪ್ರಭಾವ ಬೀರುವ ಅಂಶ ಗಂತಂದ್ರೆ ಆ ಜನಾಂಗದ ಪ್ರತಿಶತ ಶೈಕ್ಷಣಿಕ ಮಟ್ಟ ಮತ್ತೆ ಸಾಮಾಜಿಕ ಪರಿಸ್ಥಿತಿ.

ಹಿಂಗಾಗಿ, ಒಂದು ಮನೆತನ ಹಣಕಾಸ್‌ಲಿ ಮುಂದುವರೆದಿದ್ದರೂ ಸಾಮಾಜಿಕವಾಗಿ ಮುಂದುವರ್ದುಂಟ್ಟುಂತಾ ಹೇಳಿಕ್ಕಾದುಲೆ.

ಸಾಮಾಜಿಕ ನಡೆನುಡಿ ಅಂಥಂದರೆ ನಾವ್ ನಾಲ್ಕಾರ್ ಜನ ಸೇರ್ದಲ್ಲಿ ಎಷ್ಟ್ ಸಾಮಾಜಿಕ ಕಾಳಜೀಂದ ಲಾಯ್‌ಕ್ಕಾಗಿ ವರ್ತಿಸಕು ಎಂಬ ವಿಚಾರ. ಏಕೇಂತೇಳ್ರೆ ಮದುವೆ ಅಥವಾ ಇನ್ನಿತರ ಸಾಮಾಜಿಕ ಸಮಾರಂಭಲಿ ಜನ ನಮ್ಮ ಪರೀಕ್ಷಾತ್ಮಕ ದೃಷ್ಟಿಕೋನಂದ ನೋಡುವೆ.

ಹುಂಗೇ ಹೇಳುದ್ರೆ ನಮ್ಮ ಹೆಣ್ಣ್ ಜನ ಸಾಮಾಜಿಕ ಸಮಾರಂಭಗಳ ಸಂದರ್ಭಲಿ ಬಹಳಷ್ಟ್ ಗಂಭೀರವಾಗಿ ಮಾತ್ರ ಅಲ್ಲ, ಸೊಗಸಾಗಿ ನಡ್ಕಂಡವೆ ಅಂಥ ಹೇಳಿಕೆ ಖುಷಿ ಆದೆ.

ನಮ್ಮದ್ ಅನಕ್ಷರಸ್ಥ ಜನಾಂಗ ಅಲ್ಲ. ಆದರೆ ನಾವು ಸಾಮಾಜಿಕ ಕಳಕಳಿನ ಸಾಕಷ್ಟ್ ಬೆಳಸಿಕಂಡತ್ಲೆ. ಉದಾಹರಣೆ ಹೇಳೊಕ್ಕುಂತಾದರೆ ಮದುವೆ ಅಥವಾ ಬ್ಯಾರೆ ಸಮಾರಂಭಗಳಿಗೆ ಹೊರ್ಡ್‌ಕಾಕನ ಹೆಣ್ಣ್ ಜನ ತಮ್ಮ ಗಂಡದ್ರಿಗೆ ಹೇಳ್ದು ನಾವೆಲ್ಲ ಕೇಳಿರುವಂತದ್ದೆ. ಹೆಣ್ಣ್ ಗಂಡಂಗೆ ಹೇಳ್ದೆ "ಚೌರ ಮಾಡಿಕಂಡ್ ಸ್ವಲ್ಪ ಲಾಯಕ್ಕಾಗಿ ಹೊರಡಿಕ್ಕೆ ಬೊತ್ತಾ...? ಅದ್ಕೆ ನಮ್ಮ ಘನಂದಾರಿ ಗಂಡ್ ಹೇಳ್ದ ನಾನ್ ಚೌರ ಮಾಡ್ತ್‌ಲೆತಾ ಯಾರಾದರ್ ಓಡ್ಸಿವೇ ನೋಡ್ನೆತ. ಅದ್ಕೆ ಹೆಣ್ಣ್ ಇವರ ಹಣೆಬರಹಂತೇಳಿ, ಸಾಯಲಿ ! ಪೆಟ್ಟಿಗೆಲಿ ಮಡ್‌ಗಿರ್‌ವ ಒಳ್ಳೆ ಬಟ್ಟೆನ ಹಾಕಣಿತಾ ಆದ್ರೆ ಈ ಗೃಹಸ್ಥ ಕೇಳ್ದುಲೆ. ಈಗ ಹೆಣ್ಣ್‌ಗೆ ಸಿಟ್ಟ್ ಬಂದ್-ನೋಡಿ, ಕಂಠಮುಟ್ಟಾ ಕುಡ್ಕಂಡ್ ಜೈಜೈ ಮಾಡ್ಬೆಡಿ ಗೊತ್ತಾತಲೆ, ಮತ್ತೆ ನಾ ಸುಮ್ಮನಿರ್ಕಿಲೆ ! ಇಷ್ಟಾದರೂ ಗಂಡ್‌ಜನ ಮಾಡವ್ ಕಾರ್‌ಬಾರೇ ಬ್ಯಾರೆ. 'ಓಪನ್ ಬಾರ್'ನ ಕೌಂಟರ್‌ಗೆ ದನ ನುಗ್ಗಿದಂಗೆ ನುಗ್ಗಿ ಮೂರ್ 'ಪೆಗ್ಗ್' ಗಟಗಟಾಂತ ಹೀರುವೆ ಇವ್ರೆ ಸೋಡ ಸನಾ ಬ್ಯಾಡ.

ಈ ಸ್ಥಿತಿಲಿ ನಾವೊಂದ್ 'Parrele| race' ಆಗಿ ಬೆಳೆಯೋಕು. ನಮ್ಮನ್ನ ಜನ 'Decent Crowd' ಅಂತ ಗುರ್ತಿಸುವ ಅಗತ್ಯ ಉಟ್ಟು.

ನಾವು ಆದಷ್ಟ್ ಸೊಗಸಾಗಿ ಬಟ್ಟೆ ಬರಿ ಧರಿಸೊಕು. ನಾವು ಲಾಯಕ್ಕಾಗಿ ಡ್ರೆಸ್ ಮಾಡ್‌ದ್ರಂದ ನಮ್ಮ ಆತ್ಮ ವಿಶ್ವಾಸ ಜಾಸ್ತಿ ಆದೆ. ಕಳ್ಳನ ನಾವ್ 'Q' ಲಿ ನಿಂತ್ ತಗಂಡ್ ಆರಾಮಾಗಿ ಕುಡಿಯೋಕು. ಒಂದು ಅಥವಾ ಎರಡ್ ಡ್ರಿಂಕ್‌ಗೆ ನಿಲ್ಸಿರೆ ಎಲ್ಲಾ ದೃಷ್ಟಿಂದ ಒಳ್ಳೆದ್

ನಮ್ಮ ಓಳ್ಳೆ 'ಸಾಮಾಜಿಕ ನಡೆನುಡಿ, ಯಿಂದ ಮಾತ್ರ ನಮ್ಮ ಅಸ್ತಿತ್ವಕ್ಕೆ ಬೆಲೆ ಬಂದದೆ.

[ಮುಂದುವರಿಯುವುದು]

● ಕಟ್ರತನ ತಾರ ಪ್ರಸಾದ್
ಸದಸ್ಯರು, ಗೌಡ ಸಾಂಸ್ಕೃತಿಕ ಅಕಾಡೆಮಿ,
ಮಡಿಕೇರಿ

ಪಂಚಾಯಿತ್ತಿತೇಳ್ರೆ ಹಿಂಗೆ

ಪಕ್ಷಗ ತೇಳಿ ಹುಟ್ಟ್ಕ ಹಾಕಂಡೊ ಜನಗ
ಅದರ್ನ ಒಡ್ಡೊ ಜನಗಳಂಗೆ ಮಂತ್ರಿಗ
ಅವೆಲ್ಲಾ ಸೇರಿ ಆತ್ ಮರಿ ಪಕ್ಷಗ
ಅಲ್ಲೂ ಸಾ ತಿಂಬವ್ ಇದ್ದೋ ಕಂತ್ರಿಗ ॥

ಎಲ್ಲಾ ಹೇಳಿ ಆತ್ ಗ್ರಾಮ ಪಂಚಾಯ್ತಿಗ
ರಸ್ತೆ ಮಾಟ್ಟೊ, ಗಿಡ ಕೊಲ್ಲೊ, ಅನ್ಯಾಯ ಮಾಡ್ಡೊ
ಅಂದ್ರೆ ಎಲ್ಲಾ ಸವಲತ್ ರಸ್ತೆ ಹೋದಂಗೆ ಹೋತ್
ನಡ್‌ದಾಡುವ ದಾರಿ, ಇರ್ಪ ಮನೆಗೆ ರಸ್ತೆ ಇಲ್ಲಾದಾತ್ ॥

ಆ ಪಂಚಾಯಿತಿಲಿ ಎಲ್ಲಾ ಇರ್ಪ ಪೋಕರಿಗ
ಅದಿಕ್ಕೆ ಯಾವ್ದು ಇಲ್ಲೆ ಈಗ ಚಾಕರಿಗ
ಪಂಚಾಯ್ತಿ ತೇಳ್ರೆ ಇರ್ಕೆ ಆಗದ್ ತಲೆನೋವು
ಇಲ್ಲಿ ಇರ್ದು ಮಾತ್ರ ಅನ್ಯಾಯ ಮಾಡೊವು ॥

● ಕೋಡಿ ಮುತ್ತಣ್ಣ ಉದಯಕುಮಾರ್

ಸೂಕ್ತಿ :

ಸವಿ ಮಾತನಾಡುವ ಪತ್ನಿ ಗಂಡನ ಆತ್ಮೀಯ
ಗೆಳತಿಯೆನ್ನಿಸ ಬಲ್ಲಳು

– ಭಾರತದ ನಾಣ್ಣುಡಿ

ಜಾಣ ಪೆದ್ದ ವೆಂಕು

ಒಂದಿನ ವೆಂಕುನ ಅವ್ವ ವೆಂಕುನೊ ಟ್ಟಗೆ ಮೇಲೆ ಮನೆ ಜೋಮುಣಿನವುಕೆ ಎರ್ಡ್ ಕೋಳಿ ಕೊಡಿಕೆ ಉಟ್ಟು. ನೀ ಹೋಗಿ ಕೊಟ್ಟ್‌ಬಾಂತ ಹೇಳ್ತ್. ಆಗ ವೆಂಕು ಅತವ್ವಾ ಬೇಗ ಹಿಡ್ದ್ ಕೊಡುಂ ತೇಳ್ತ್. ಆಗ ಸಾಯಂಕಾಲ ನಾಕ್ ಗಂಟೆ ಹೊತ್ತ್. ಅವ್ವ ಎರ್ಡ್ ಲಾಕಿಗಳ ಹಿಡ್ದ್ ಕೊಟ್ಟತ್. ಇಂವ ಕೋಳಿಗಳ ಹಿಡ್ಕಂಡ್ ಹೊರ್ಟತ್. ಹೊರಡುವ ರಭಸಲಿ ಕೋಳಿ ಕಾಲಿಗೆ ಹಗ್ಗ ಕಟ್ಟಕ್ಲೆ ಸಣ್ಣ ಕೋಳಿಗಲ್ಲ, ಹೆಂಗಾರ್ ಹಿಡ್ಕಂಡ್ ಹೋವೆಂತೇಳಿ ಒಂದೊಂದರ ಹಿಡ್ಕಂಡತ್. ಒಂದೆರ್ಡ್ ಫರ್ಲಾಂಗ್ ದೂರ ಹೋತೋ ಇಲ್ಲೆಯೋ.

ಬಿ.ಆರ್. ಜೋಯಪ್ಪ, ಮಡೆ

ಹಿಂಗೇ ಹೋಗ್ತಾ ಇರಕನ ಏನಾತ್? ಇಂವ ಹಾಕಂಡಿದ್ದ ಚಡ್ಡಿ ಇವನ ಮಾತ್ ಕೇಳುವಂಥದ್ದಲ್ಲ. ಆ ಚೆಡ್ಡಿದ್ ಕೊಂಡಿ ಕಣ್ ದೊಡ್ಡದಾಗಿ ಕೊಂಡಿ ಆಗಾಗ ಬಿಚ್ಚಿಬಿಚ್ಚಿ ಹೋದು. ಇವಂಗೆ ಈ ಚೆಡ್ಡಿ ಕೈಕೊಟ್ಟದೆಂತ ಗೊತ್ತ್‌ಲೆ. ವೆಂಕು ಬೇಗ ಬೇಗ ಹೋಗ್ತಾ ಇರಕನ ದಾರಿ ಮಧ್ಯಲಿ ಚೆಡ್ಡಿದ್ ಕೊಂಡಿ ಬಿಚ್ಚಿ ಕಂಡತ್. ಚೆಡ್ಡಿ ಜಾರಿ ಬಿದ್ದೋತು. ಈಗ ಏನ್ ಮಾಡ್ದು? ಒಡೊಂದು ಕೈಲಿ ಒಡೊಂದು ಕೋಳಿಗ ಒಳೊ. ಕೋಳಿನ ಬುಟ್ಟರೆ ಅದ್ ಮತ್ತೆ ಸಿಕ್ಕಿಕಿಲೆ. ಹಿಂಗೆ ನಿತ್‌ಕಂಡ್ರೆ ದಾರಿಲಿ ಹೋಗವುಕೆ ಬರೋವುಕೆ ಪುಕ್ಸಟೆ ಪ್ರದರ್ಶನ ಬೇರೆ! ಇಂಥಾ ಸಂಕಟಲಿ ಸಿಕ್ಕಂಡ ವೆಂಕುನ ಗೋಳುನ ಯಾರೊಟ್ಟಗೆ ಹೇಳ್ದು? ಅತ್ತಂದ ಬೇರೆ ಯಾರೋ ಬರ್ತಾ ಒಳೊ. ಹಾಳಾಗಿ ಹೋಗಲಿಂತ ಎರಡೂ ಕೋಳಿಗಳ ಬುಟ್ಟತ್. ಚೆಡ್ಡಿನ ಎತ್ತಿ ಸೊಂಟಕೆ ಸಿಕ್ಕಿಸಿಕಂಡತ್ ಕೊಂಡಿನ ಹಾಕಿತ್. ಅಲ್ಲೇ ಬೇಲಿಲಿದ್ದ ಬಳ್ಳಿನ ಎಳ್ದ್ ಸೊಂಟಕೆ ಸುತ್ತಿಕಂಡತ್. ಇಷ್ಟೆಲ್ಲಾ ಆಕನ ಕೋಳಿಗ ಯಾರ್ದೋ ತೋಟದೊಳಗೆ ನುಗ್ಗಿಕಂಡೊ. "ಕೋಳಿ ಬಾಬಾ, ಇಂದ ಬಾಬಾತ ಕರ್ತ್. ಹೆಂಗೆ ಕರ್ದರೂ ಕೋಳಿಗ ಅತ್ತತ್ತಲೇ ಹೋದೊ. ಈಗ ಎನ್ ಮಾಡ್ದು? ಮನೆಗೆ ಹೋದರೆ ಅವ್ವ ಬಡಿಯದೆ ಬುಡಿಕಿಲೆ. ಬಡ್ದರೂ ಬಡೇಲಿಂತ ಧೈರ ಮಾಡಿಕಂಡ್ ಮನೆಗೆ ಹೋಗಿ ಹಿಂಗಿಂಗಾತವ್ವಾಂತೇಳ್ಕನ ಅವ್ವಂಗೂ ನಗೆ ತಡೆಕೆ ಜೊತ್ತಾತ್.

ಇನ್ನೊನ್ಮೆ ಹಿಂಗಾತ್ : ಮನೆಗೆ ಯಾರೋ ನೆಂಟ ಬಂದುಟ್ಟ್‌ತೇಳಿ ವೆಂಕುನ ಅಂಗ್ಡಿಗೆ ಕಳ್ಸಿತ್. ಅರ್ಜೆಂಟಾಗಿ ಎರ್ಡ್ ಮೊಟ್ಟೆ ತಕಂಬಾ. ಅಂಗ್ಡಿಲಿ ಜನ್ರ ಬಾಯಿ ಬಾಯಿ ನೋಡಿಕಂಡೇ ನಿಲ್ಲುಬಡಂತೇಳಿ ಕಳ್ಸಿತ್. ವೆಂಕು ಅಂಗ್ಡಿಗೆ ಓಡಿಕಂಡೇ ಹೋತು ಹೋದಂಗೆ ಎರ್ಡ್ ಮೊಟ್ಟೆ ತಕಂಡತ್. ಆ ಮೊಟ್ಟೆನ ಕೈಲಿ ಹಿಡ್ಕಂಡತ್‌ಲೆ. ಸುರಾಲ್ ಜೋಬಿಗೆ ಒಂದೊಂದ್ ಮೊಟ್ಟೆ ಹಾಕಂಡತ್. ಓಡಿಕಂಡೆ ಬಾತ್. ಆ ಸುರಾಲ್ ಹಾಕಿರೆ ಬಿಚ್ಚಿಕೆ ಬತ್ತದೆ, ಬಿಚ್ಚಿರೆ ಹಾಕಿಕೆ ಬತ್ತದೆ. "ಟೈಟ್ ಪ್ಯಾಂಟ್‌ದ್" ಕಾಲ. ಹಿಂಗಿರುವ ಆ ಸುರಾಲ್‌ದ್ ಜೋಬು ಹೆಂಗಿರ್ದು? ಇಂವ ಓಡಿಕುಡೇ ಬಾತ್‌ನೋಡಿ. ಬಂದ ಮನೆಲಿ ನೋಡಕನೇ ಗೊತ್ತು ಮೊಟ್ಟೆ ಏನಾತ್‌ತ. ಎರ್ಡೂ ಮೊಟ್ಟೆ ಒಡ್ಡೋಗಿ ಎರ್ಡೂ ಕಾಲಿಗಾಗಿ ಮೊಟ್ಟೆದ್ ಲೋಳೆ ಇಳ್ದ್ ಬರ್ತಾ ಇತ್ತ್.

ಇಂಥಾ ಜಾಣ ಪೆದ್ದರ್ ನಿಮ್ಮ ಕಡೆನೂ ಒಳೋನಾ? ○

ನ ಗೆ ಹ ನಿ

ಗೂಡೆ :– ಎಲ್ಲರೂ ಹೇಳ್‌ವೆ ಮದುಯಾದ ಮೇಲೆ ಗಂಡಂಗೆ ಹೆಣ್ಣ್‌ಮೇಲೆ ಪ್ರೀತಿ ಕಮ್ಮಿತ...ನೀವುಸ ಹಾಂಗೆನಾ..?

ಹೈದ :– ಹಾಂಗೆ ನೀನ್ ಯಾಕೆ ಹೇಳಿಯ? ಎಲ್ಲರ ಹಾಂಗೆ ನಾನ್‌ತ ಯಾಕೆ ಗ್ಯಾನ ಮಾಡ್‌ದ? ನಾನ್ ನನ್ನ ಬಾಸ್‌ನ ಹಾಂಗೆ. ಅವು ಮದುವೆ ಆಗಿ ಐವತ್ತು ವರ್ಷ ಆದರೂ ಸಹ ಇನ್ನು ಪ್ರೀತಿ ಮಾತ್ರ ಕಮ್ಮಿಯಾತ್‌ಲೇ. ಅವು ಅವರ ಸೆಕ್ರೆಟ್ರಿ ಗೂಡೆನ ಎಷ್ಟು ಪ್ರೀತಿ ಮಾಡುವೆ ಗೊತ್ತಾ...? ಅಷ್ಟೇ ಪ್ರೀತಿ ಅವರ ಹೆಣ್ಣ್‌ಸ ಅವರ ಡ್ರೈವರ್‌ನ ಮಾಡ್‌ದೆ. ಪ್ರೀತಿ ಎಷ್ಟ್ ಶಾಶ್ವತ ಅಲ್ಲ, ನೀ ಏನ್‌ಹೇಳಿಯಾ..... ?

● **ಬಿಟ್ಟೀರ ನೈನಿ ರಾಮಯ್ಯ**, ಮಡಿಕೇರಿ

ಪುಸ್ತಕ ಬಿಡುಗಡೆ

ಪುಸ್ತಕ

ಯಾರ ಬೇಟೆ ಮತ್ತು ಇತರ ಪ್ರಸಂಗಗಳು.

ಲೇಖಕರು : ಬಿ. ಆರ್. ಜೋಯಪ್ಪ, ಮಡೆ

ಬಿಡುಗಡೆಯ ಸ್ಥಳ : ಕ್ರೈಸ್ಟ್ ಕಾಲೇಜು, ಬೆಂಗಳೂರು

ದಿನಾಂಕ : 31-1-1998

ಅರೆಭಾಷೆ ಹಾಡು

ಗಾಳಿಗೆ ರಂಗಿಲ್ಲೆ ನೋಡಕ್ಕೆ ನೆಲೆಯಿಲ್ಲೆ ।
ಅಪ್ಪನ ಮನೆ ಸ್ಥಿರಯಿಲ್ಲೆ ।
ಅಪ್ಪನ ಮನೆ ಸ್ಥಿರಯಿಲ್ಲೆ ಹೆಣ್ಣಿಗೆ
ಗಂಡನ ಮನೆಲಿ ಬಾಳೋಕು ॥
ಅಪ್ಪನ ಕೊಡಿ ಕೂಸು ಅವ್ವನ ಕೊಂಡಾಟ ।
ಇದ್ ಎಲ್ಲ ಮರ್‍ತ್‌ನೀ ಮಗಳೆ ।
ಇದ್ ಎಲ್ಲ ಮರ್‍ತ್‌ನೀ ಮಗಳೇ
ತುಂಬಿದ ಮನೇನ ಒಡಿಬ್ಯಾಡ ॥
ಬೇಲಿ ಮೇಲಿದ್ದ ಹೂ ಲಾಯಿಕಿದ್ದರೇನ್ ।
ಮಲ್ಲಿಗೆ ಹೂನಂಥ ಮನೆಗಂಡನ ಬ್ಬುಟ್ ।
ಮಲ್ಲಿಗೆ ಹೂನಂಥ ಮನೆಗಂಡನ ಬುಟ್ಟ್ ಬೇರೆ
ಪುರುಷರ ಗೇನಮಾಡ್‌ಬ್ಯಾಡ ॥ ಗಾಳಿಗೆ ರಂಗಿಲ್ಲೆ ॥
ಅತ್ತೆ ಮನೆಲಿ ಲಾಯಿಕಾಗಿ ಇರೊಕ್ಕವ್ವ
ಸಂಸಾರ ನೆಂದೂ ದೂರ್‌ಬಡ ॥ ಮಗಳೇ ॥
ತವರಿಗೆ ಒಳ್ಳೆ ಹೆಸ್ರ ತರೋಕೂ
ಜರಿ ಸೀರೆಗೆ ಮುತ್ತಿನ ಮಡಿಲಕ್ಕಿ
ಮೆಟ್ಲು ಮೆಲ್ಲೆ ಇಳಿಯವ್ವ ಮಗಳೇ
ನೀ ಸೇರ್‌ದ ಮನೆಲಿ ಲಾಯಿಕಿರೋಕು ॥ಗಾಳಿಗೆ ರಂಗಿಲ್ಲೆ॥
ಹಿರಿಯವ್ರ ಮಾತಿಗೆ ಉತ್ತರ ಕೊಡಬ್ಯಾಡ
ಹಿರಿಯವ್ರ ಮಾತಿಗೆ ನಡೆಬ್ಯಾಡ ॥ ಮಗಳೇ ॥
ಲಾಯಿಕಾಗಿ ಬಾಳ್ ನಡಸೋಕು ॥ ಗಾಳಿಗೆ ರಂಗಿಲ್ಲೆ ॥

○ **ಕಲ್ಲುಮುಟ್ಲು ಶಾಂತಿ ಚೆಟ್ಟಿಮಪ್ಪ**, ಐಕೋಳ ಗ್ರಾಮ

ಲಾವಣಿ

ಆರತಿ ಎತ್ತಿದೊ ಹೆಂಗ್‌ಸ್‌ಗಾಗ
ಗಂಡ್‌ನ ಒಳಿಗೆ ಕರೆಕುಟ್ಟು
ಹೆಣ್ಣ್‌ಗೆ ಕಟ್ಟಿವೆ ತಾಳಿನ ಕೂಡ
ಗಂಡ್‌ನ ಕಡೆಪು ತಾಕುಟ್ಟು,
ಗೂಡೆಗೆ ರಮ್ಮೆ ಸೀರೆನ ಎಲ್ಲಾ
ಗಂಡಂವ ಮುಂದೇನೆ ಕೊಡಿಕುಟ್ಟು,
ಬೆಳ್ಳಂಗೆ ಸೀರೆ ಉಟ್ಟುದ್ ಗೂಡೆ
ಕ್ವಾಂಬರೆ ಒಳಿಗೆ ಕುದ್ದುಟ್ಟು,
ಗೂಡೆನ ಹೈದನ ಕರ್ಕಂಡ್ ಬಂದವೆ
ಚಪ್ಪರದಡಿ ಮಂಟಪಕೆ
ಆಗಳೆ ನೋಡಿ ಕರ್ದುವೆ ಹೇಳಿ
ಗೊತ್ತಾಕುಂತದ್ ಎಲ್ಲೊವುಕೆ
ಗೌಡ ಜನಾಂಗಲಿ ಇರಿಕೆನು ಉಟ್ಟು,
ಧಾರೆನ ಮಾಡುವೆ ಎರಡ್ ತರ
ನಮ್ಮ ಈ ಗೌಡರ ಕೂಟಲಿ ನಡ್ಯೆದು
ಹೆಚ್ಚಿಗೆ ಒಂದೇ ಒಂದ್ ತರ
ಕ್ಷೌರವು ಗೂಡೆನ ಕೊಟ್ಟವೆಂತಾಕನ
ಖಂಡಿತ ಮಾಡುವ ಕ್ರಮ ಉಟ್ಟು
ಖಂಡಿತ ಆದರೆ ಕುಟುಂಬದ ಜೆನಕೆ
ಗಂಡ್‌ನೆ ಎಲೆಅಡ್ಕೆನ ಕೊಡಿಕುಟ್ಟು
ಗಂಡ್‌ನ ಮನೆವು ದಿಬ್ಬಣದೊಟ್ಟಿಗೆ
ಗೂಡೆನ ಮನೆಗೆ ಹೋಕುಟ್ಟು,
ಗೂಡೆನ ಮನೆಗೆ ಬಂದದೆ ಗಂಡ್
ಮೊದುವೆನು ಆದದ್ ಹೆಚ್ಚಿಟ್ಟು
ಚಪ್ಪರದಡಿಗೆ ಬಾಕನ ಗಂಡ್‌ಗೆ
ನೀರ್‌ಲಿ ಪೂಜೆನ ಮಾಡಿಕುಟ್ಟು
ಗೂಡೆನ ತಮ್ಮನೆ ನೀರ್‌ನ ತಂದ್
ಗಂಡ್‌ನ ಕಾಲ್‌ಗೆ ಹೊಯ್ಯೊಕುಟ್ಟು

ಕೆ.ಜಿ. ಶಿವಕುಮಾರ್ (ಪ್ರಭು)
ಮಡಿಕೇರಿ.

ಆಪರೇಷನ್ ನಗೆ ಹನಿ

ವೆಂಕಪ್ಪ ಮತ್ತ್ ಚೆಲುವೆ ಗಂಡ ಹೆಣ್ಣ್. ಅವರ್‍ದ್ ಒಂಬತ್ತ್ ಮಕ್ಕಳ ದೊಡ್ಡ ಸಂಸಾರ. ಊರ್‌ನ ಗೌಡ್ರ ಮನೇಲಿ ವೆಂಕಪ್ಪಂಗೆ ಕೆಲ್ಸ. ಒಂಬತ್ತ್ ಮಕ್ಕಳಾದರೂ ಅವ್ಕೆ ಮಕ್ಕಳ ಆಸೆ ಬುಟ್ಟಿತ್ಲೆ. ಒಂದ್‌ದಿನ ಸಾವುಕಾರ ಹೇಳ್ತ್, "ವೆಂಕಪ್ಪ ಇನ್ನ್ ನಿಂಗೆ ಮಕ್ಕ ಆದರೆ ಕಷ್ಟಉಟ್ಟು ಸಾಕಿಕೆ" ಅಂತ. ವೆಂಕಪ್ಪ ಹೇಳ್ತ್, ಅದ್ಕೆಲ್ಲ ಬಂದೊಬಸ್ತ್ ಮಾಡಿಸಿ ಬುಟ್ನೊಳೆ ತೇಳಿ. ಹಿಂಗೆ ಇರ್‌ಕ್‌ನ ಒಂದ್ ದಿನ ಬೆಳಿಗ್ಗೆ ವೆಂಕಪ್ಪ ಗೌಡ್ರಮನೆಗೆ ಬಂದ್ ಧನಿ, ಧನಿ ತೇಳಿ ಕರ್ಯಕೆ ಶುರು ಮಾಡ್ತ್. ಸಾಹುಕಾರ ಎಂತ ಮಾರಾಯ ನಿಂದ್ ಬೆಳಗಾಕನ ರಾಮಾಯಣ ಅಂತ. ಕೇಳ್ತ್ ಅದ್ಕೆ ವೆಂಕಪ್ಪ ಚೆಲುವೆಗೆ ಹೆರಿಗೆ ಹೊಟ್ಟೆ ಬ್ಯಾನೆ ಬಂದುಟು, ಆಸ್ಪತ್ರೆಗೆ ಹೋಕೆ ದುಡ್ಡು ಬೇಕುತಾ. ಆಗ ಸಾವುಕಾರ ಕೇಳ್ತ್, ಅಂದ್ ಕೇಳ್‌ಕನ ಹೇಳ್ದ, ಅದಕೆಲ್ಲ ಬಂದೊಬಸ್ತ್ ಮಾಡ್ನೊಳೀತಾ. ಆಗ ವೆಂಕಪ್ಪ ಹೇಳ್ತ್ ಬಂದೊಬಸ್ತ್ [ಅಪರೇಶನ್] ಮಾಡಿ ಕಂಡದ್ ನಾನ್, ಚೆಲುವಿ ಅಲ್ಲಂತೇಳ್ತ್ ಸಾವುಕಾರಂಗೆ ಸುಸ್ತ್.

● **ಎ.ಕೆ. ರಮೇಶ್** ಚೇರಂಬಾಣೆ.

ಪುಣ್ಯ ತಿಥಿ



ದಿ|| ಕೋಡಿ ಬೋಜಪ್ಪ ಮೇದಪ್ಪ

ಜನನ : 10-06-1938 ಮರಣ : 18-01-1997

ನೀವು ನಮ್ಮನ್ನು ಅಗಲಿ ಇಂದಿಗೆ ವರ್ಷ ತುಂಬಲಿದೆ. ನಿಮ್ಮ ಸವಿನೆನಪನ್ನು ಎಂದೂ ಮರೆಯಲಾಗದು. ನೀವು ಹಾಕಿ ಕೊಟ್ಟ ದಾರಿ ನಮಗೆಲ್ಲಾ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಭಗವಂತನು ಸದಾ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ,

ಪತ್ನಿ ಮಾಚಮ್ಮ, ಮಕ್ಕಳು, ಮರಿಮಕ್ಕಳು
ಅಳಿಯಂದಿರು, ಸೊಸೆಯಂದಿರು,
ಚೆಟ್ಟಿಮಾನಿ, ಕೊಡಗು ಜಿಲ್ಲೆ, : 571247

ಪ್ರಿಯ ಓದುಗರ ಗಮನಕ್ಕೆ

'ಕೊಡಗು ಸಂಗಾತಿ' ಪಾಕ್ಷಿಕ ಪತ್ರಿಕೆಯು ಗೌಡ ಜನಾಂಗದ ಏಳಿಗೆ ಐಕ್ಯತೆಯನ್ನು ಬಯಸಿ ಹೊರಹೊಮ್ಮಿ ಇದೀಗ ವರ್ಷ ತುಂಬಲಿದೆ. ನೀವುಗಳು ಕೋರದಿದ್ದರೂ ಸಹ ನಿಮ್ಮ ಆಪ್ತರು ಕೊಟ್ಟ ವಿಳಾಸದ ಮೇರೆ ನಾವುಗಳು ದಿನಾಂಕ 1-4-97 ರಿಂದಲೂ ಮತ್ತು ಇತ್ತೀಚೆಗೂ ಸಹ ಪತ್ರಿಕೆಯನ್ನು ಕಳಿಸಿದ್ದೇವೆ. ಆದರೆ ಹಲವು ನಮ್ಮ ಪ್ರಿಯ ಓದುಗರಿಂದ ಈ ತನಕ ಯಾವುದೇ ರೀತಿಯ ಸ್ಪಂದನವಿರುವುದಿಲ್ಲ. ಇದರಲ್ಲಿ ಕೆಲವರು ತ್ರೈಮಾಸಿಕ, ಇನ್ನು ಕೆಲವರು ಅರೆವಾರ್ಷಿಕ ಚಂದಾ ಹಣವನ್ನು ಕೊಟ್ಟಿರುತ್ತಾರೆ. ಇವರಲ್ಲಿ ಕೆಲವರದು ವಾಯಿದೆ ಮುಗಿದಿರುತ್ತದೆ. ಅಂತವರು ಪುನಃ ಚಂದಾ ಹಣವನ್ನು ಪಾವತಿಸಿ ನಿಮ್ಮ ಸದಸ್ಯತ್ವವನ್ನು ನವೀಕರಿಸಿಕೊಳ್ಳಬೇಕಾಗಿ ವಿನಂತಿ. ಇನ್ನು ಮುಂದಕ್ಕೆ ಸದಸ್ಯರಿಗೆ ಮಾತ್ರ ಪತ್ರಿಕೆಯನ್ನು ಕಳುಹಿಸಲಾಗುವುದು.

–ಸಂಗಾತಿ ಬಳಗ

K·R.N.N. 240

Printed by M K Thammaiah and Published by Kodagu Sangathi on behalf of Pattada P. Sheelamani and Printed at AHSIRWAD PRINTERS, 180/A, 6th Main, Vinayakanagar, Mysore-12 Published at Mysore, Editor PATTADA P. SHEELAMANI, No. 35, 1st Cross, 4th Block, (Near Divisional Telephone Office) Jayalakshmipuram, Mysore-570012 Phone : 516771